CLAUSES 5 TO 10

Mr. SPEAKER.—Question is :

"That clauses 5 to 10, both inclusive, stand part of the Bill"

The motion was adopted.

Clauses 5 to 10, both inclusive, were added to the Bill.

Mr. SPEAKER.—The question is :

"That Clause 1, the Title and the Preamble stand part of the Bill".

The motion was adopted.

Clause 1, the Title, the Preamble were added to the Bill.

Motion to pass

Sri RAMAKRISHNA HEGDE.—Sir, I move :

"That the Mysore Ministers' Salaries and Allowances (Amendment) Bill, 1968 be passed."

Mr. SPEAKER.—The question is :

"That the Mysore Ministers' Salaries and Allowances (Amendment) Bill, 1968 be passed."

The motion was adopted.

MYSORE IRRIGATION (LEVY OF BETTERMENT, CONTRIBUTION AND WATER RATE, (AMENDMENT) BILL, 1968.

Motion to Consider

Mr. SPEAKER.—Now, the Mysore Irrigation (Levy of Betterment, Contribution and Water Rate (Second Amendment) Bill, 1968 will be taken up for consideration.

Sri M. NAGAPPA.—Sir, I have got a point of order for that. My point of order is this, Sir. There are two Bills that are going to be taken up as per the Agenda. One is the Mysore Irrigation Levy of Betterment Contribution and Water Rate (Second Amendment) Bill, 1968 published on 16th August 1968 and the second is, the Mysore Irrigation Levy of Betterment, Contribution and Water Rate (Second Amendment) Bill, 1968 published on 30th August 1968. They are contradictory Bills. Contradictory amendments have been brought by amending the amending Bill. Is it proper to bring one amendment to section 4 and at the same session bring another amendment to it by changing the entire section? Therefore I submit it is not quite in order unless one of the Bills is withdrawn. No Rules of Procedure will permit placing two contradictory Bills on the Table of the House.

Mr. SPEAKER.—The hon. Member Sri Nagappa has raised an important point. Let one bill be discussed and disposed of. When the contradiction comes up, let him raise that point at that time. Then the amendments would be cleared.

Sri M. NAGAPPA.—It will create more complications.

Mr. SPEAKER.—It is for the Government to consider your plea. Your point about contradiction will be cleared after the passing of the first Bill.

Sri M. NAGAPPA.—Sir, No. 11 is going to amend only the words "300 rupees to 500". If you see the original, there is no word "300" which is going to be amended as "Rs. 500". In the originalt Act also it is 500 and 500 is being amended. Secondly, the same section 4 is going to be amended by another bill No. 15. If this Bill is passed, and if another amendment is taken, there will be a complication in considering that matter.

Mr. SPEAKER.—My point is, it is for the Minister to consider and it is for the House to accept or not to accept any particular thing. There are two Bills which you say contradict each other; it is your plea. When we consider the first Bill and if it is passed, the contradiction does not arise. When they move the second Bill, then you may raise the objection.

†Sri H. SIDDAVEERAPPA (Harihara).—Sir, both are already introduced in this House and the House is seized of both the Bills. The only question is whether there is apparant contradiction as claimed by my friend. In Bill No. 11 the main substantial clause that is to be amended is section 4 and if you see Bill No. 15, there is also amendment to clause 4. There a desire is expressed that it should be substituted by a new clause altogether. Therefore, we cannot hustle through the matter by legislation. It is better that the Treasury Benches examine it. Nothing is lost when it is examined in the light of the point of order that has been raised by my friend. I feel there is some substace in the point of order. The hon. Minister in charge of the Bill may examine and if he can satisfy himself, it is well and good. Otherwise, other Bills may be taken up today and this Bill may be taken up tomorrow.

Mr. SPEAKER.—Will the Minister explain the position?

Sri D. PARAMESHWARAPPA (Deputy Minister for Major Irrigation and Electrcity).—Sir, two amendments are sought to be introduced in the Mysore Irrigation Act. One is with respect to enhancement of maximum limit of contribution ....

Mr. SPEAKER.—What is the intention of Bill? Let us hear the intention of the first amending Bill and then the second amending Bill.

†ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಈಗ ಬೆಟರ್‌ಮೆಂಟ್ ಲೆವಿ 300 ರೂಪಾಯಿ ತನಕ ತೆಗೆದುಕೊಳ್ಳಬಹುದು ಎಂದು ಇದೆ. ಈಗ ಸ್ಪಿಲ್ ಓವರ್ ಕೆಲಸ ಮತ್ತು ಇರ್ರಿಗೇಷನ್ ಪ್ರಾಜೆಕ್ಟ್ ಕೆಲಸ ಬಹಳಮಟ್ಟಿಗೆ ಮಾಡಬೇಕಾಗಿರುವುದರಿಂದ ಬೆಟರ್‌ಮೆಂಟ್ ಲೆವಿಯನ್ನು 300 ರೂಪಾಯಿಯಿಂದ 500 ರೂಪಾಯಿಯವರೆಗೆ ಏರಿಸಿಕೊಂಡು ಹೋಗಲು ಈ ಬಿಲ್ಲು ತಂದಿದೆ.

(ಶ್ರೀ ವೀರೇಂದ್ರ ಪಾಟೀಲ್)

ಇನ್ನೊಂದು ಬಿಲ್ಲು ಅಡ್ವಾನ್ಸ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳುವ ಬಗ್ಗೆ ಬಿಲ್ ತಂದಿದ್ದೇವೆ. ಅದರಂತೆ, ಯಾರು ಅಡ್ವಾನ್ಸ್ ಬೆಟರ್‌ಮೆಂಟ್ ಕೊಡುತ್ತೇವೆ ಎಂದು ರೈಟಿಂಗ್‌ನಲ್ಲಿ ಬರೆದುಕೊಟ್ಟರೆ ಅಂಥಾ ಅಡ್ವಾನ್ಸನ್ನ ಅಡ್ವಾನ್ಸ ಕಾಂಟ್ರಿಬ್ಯೂಷನ್‌ಆಗಿ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಈಗ ಇರುವ ಬಿಲ್‌ನಲ್ಲಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಈ ಬಿಲ್ಲಿನಂತೆ ಎಲ್ಲೆಲ್ಲಿ ಬೆಟರ್‌ಮೆಂಟ್ ಲೆವಿ ಇದೆಯೋ ಅಲ್ಲಿ ರೆಟ್ರಾಸ್ಪೆಕ್ಟೀವ್ ಎಫೆಕ್ಟಿನಿಂದ 300 ರೂಪಾಯಿಗಳಿಗೆ ಬದಲಾಗಿ 500 ರೂಪಾಯಿಗಳು ಕೊಡಬೇಕು ಎಂದು ಇದೆ.

Sri H. SIDDAVEERAPPA.—If that contention is accepted I would like to know from the Hon. Minister after both these Bills are passed, which will be the clause that will come as the section in the main Act. Would you like to have both or what will be the position? It is just not possible and it would not be tenable. That is my humble opinion.

Sri VEERENDRA PATIL.—The first Bill that is now going to be moved for consideration is only for substituting the words "five hundred" for the words "three hundred" in section 4 because our intention is to increase the betterment levy from Rs. 300 to Rs. 500. If this amendment is passed then the ryot has to pay at the rate of Rs. 500 whereas today under the Act he has only to pay Rs. 300.

So far as the other Bill is concerned, it is with regard to taking advance betterment contribution. If that Bill is passed, then to that extent the other provision will be incorporated in the Act. According to that provision whoever comes forward and show his willingness to pay advance betterment contribution to that extent by law we would be able to take it. That is the main object of the second amending Bill.

Sri H. SIDDAVEERAPPA.—What is the difficulty in incorporating both the provisions in Bill No. 15? Otherwise it may lead to further complication when both these clauses in these two Bills are passed into Act. The question is, when both the Bills are passed, which is the section that you are going to put in the main Act. If the Hon. Minister so wants, he may incorporate the amendment contained in Bill No. 11 in Bill No. 15 itself.

Sri VEERENDRA PATIL.—I do not think it is possible at this stage because these Bills have been published and the necessary formalities have been gone through. If according to the suggestion of the hon. member I have to incorporate the amendment contained in Bill No. 11 in Bill No. 15, that means we have to withdraw both the Bills and publish a fresh Bill in the Gazette and give two weeks time and then we will not be able to pass it in the current session itself.

†Sri M. NAGAPPA.—May I bring to the notice of the Chief Minister the wording of these amendments. The first amendent to section 4 in the first Bill says:

> "In the Mysore Irrigation (Leavy of Betterment Contribution and Water Rate) Act, 1957 (Mysore Act 28 of 1957) in the first proviso to sub-section (1) of section 4, the words 'three

hundred rupees' the words 'five hundred rupees' shall be substituted and shall be deemed always to have been substituted."

This amendment substitutes the words "five hundred rupees" for the words "three hundred rupees" in the section. But let us see the wording of the amendment in the second Bill No. 15 which says:

"For section 4 of the principal Act, the following section shall be substituted, namely.—........"

According to this the whole of section 4 of the principal Act is going to be substituted by this amendment. So the amendment proposed in Bill No. 11 will automatically not be there because that will be superseded by the amendment proposed in Bill No, 15. So this is an anomaly that is being created by putting two different Bills which are contradictory. So I humbly submit once again these Bills may be condsidered and the needful may be done.

Sri A. R. PANCHAGAVI.—The second amendment, namely amend ment in Bill No. 15 covers both contribution and advance contribution. Both things are covered by this Bill. The first amendment in Bill No. 11 covers only betterment contribution changing it from Rs. 300 to Rs. 500, whereas the second amendment covers both increased betterment contribution and advance contribution. When that is passed the first amendment in Bill No. 11 becomes redundant because the whole of section 4 is substituted by amendment in Bill No. 15. In such a case I do not think Bill No. 11 is necessary. The second amendment only would be relevant because it covers both objectives.

Sri H. SIDDAVEERAPPA.—If there is any difficulty the Hon. Minister may be permitted to move an oral amendment to section 4.

Sri VEERENDRA PATIL.—There seems to be some confusion. I have made it clear why the first amendment is necessary. The first amendment substitutes the words "five hundred" for the words "three hundred". That is necessary because that incresed betterment levy will come into effect not only for the future but also with retrospective effect. So far as the second amendment is concerned, it does not have retrospective effect.

Mr. SPEAKER.—What they say is that when Bill No. 15 seeks to substitute the whole of section 4 of the principal Act the amendment contained in the Bill No. 11 is redundant.

Sri VEERENDRA PATIL.—Not at all.

Mr. SPEAKER.—That point may be examined.

Now the House will adjourn for recess and meet at 3-30 P.M.

The House rose at Three of the Clock and re-assembled at Thirty-five Minutes past Three of the Clock.

(MR. SPEAKER in the Chair)

MR. SPEAKER.—I have an announcement in respect of the points raised by Mr. Nagappa. The Government intends to bring the Bill No. 15 tomorrow with necessary modifications. But Bill No. 11 of 1968 will be taken up for Consideration and if the House is inclined to pass, let it be passed. Now, let the Hon'ble Minister move the motion for consideration of Bill No. 11.

Sri D. PARAMESWARAPPA.—Sir, I beg to move:

> "That the Mysore Irrigation (Levy of Betterment Contribution and Water Rate) (Amendment) Bill, 1968, be taken into consideration."

MR. SPEAKER.—Motion moved:

> "That the Mysore Irrigation (Levy of Betterment Contribution and Water Rate) (Amendment) Bill, 1968 be taken into consideration."

†Sri D. PARAMESWARAPPA.—Sir, the main object with which this Amendment Bill is brought is to enable the Government to enhance the maximum limit to five hundred rupees. Sir, I believe that this House is fully aware of the different rates of betterment contribution levied at different times and the various practical and constitutional difficulties that arose in the implementation of the provisions of this Act. Sir, the House is also aware that in the Act of 1957 the betterment contribution was levied on the basis of gross produce of the land and in the implementation of the provisions of that Act certain practical difficulties were experienced. Therefore, this Act had to be amended by Act VIII of 1964 according to which betterment contribution was levied at two stages. One was called basic contribution and the other was called special benefit contribution. To this Act there was so much of objection, and so many writ petitions were also filed, saying that there was no rational basis for levying the betterment contribution, basic contribution as well as special benefit contribution. Therefore, ultimately some rational basis was found out and this Act was amended by Act XIII of 1966 according to which betterment contribution that was payable in respect of any land was equal to one half of the difference before commencement of the construction, extension or alteration of the scheme and after the completion of the project and the maximum was fixed at Rs. 300. That was the maximum that was fixed under Act 1957 as amended by Act 13 of 1966. Again we felt that this limit of Rs. 300 was very low. In view of the fact that the Government has invested huge amounts of money on projects and so far we have not been able to collect the contribution that was levied. The Government were therefore satisfied that the limit of Rs. 300 was very low and there was need to prescribe a higher limit of Rs. 500 and they thought that it would be reasonable and this amending Bill is introduced.

It is also the object to have this rate with retrospective effect because all these days we have not been able to collect betterment contribution.

With these few words, I commend this Bill for the consideration of the House.

† ಶ್ರೀ ಎಂ. ನಾಗಪ್ಪ.—ಈಗತಾನೆ ಏನು ಈ ಒಂದು ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ಮಂಡಿಸಲಾಯಿತು ಅದನ್ನು ನಾನು ಬಹಳ ಕಟುವಾಗಿ ವಿರೋಧಿಸುತ್ತೇನೆ. ಕಾರಣ ಏನೆಂದರೆ:—ಸರ್ಕಾರದವರು ಈ ಹಿಂದೆ 1957 ರಲ್ಲೇ ಇದಕ್ಕೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಈ ಮಸೂದೆಯನ್ನು ಈ ಸಭೆಯಲ್ಲಿ ತಂದು ಪ್ರ ಪ್ರಥಮವಾಗಿ ಪಾಸ್‌ಮಾಡಿದ್ದೇ 1957 ರಲ್ಲಿ. ಆ 1957 ರಲ್ಲೇ ಇದಕ್ಕೆ ಮೊದಲನೆಯ ತಿದ್ದುಪಡಿ ಆಯಿತು. ಆ ತಿದ್ದುಪಡಿಗಳೇನು ಒಂದು ರಾಜಕೀಯ ಕಾರಣಕ್ಕಾಗಿ ಆದವುಗಳೋ ಅಥವಾ ಇನ್ನಾವ ಕಾರಣಗಳಿಗಾದವೋ ಗೊತ್ತಾಗುದಿಲ್ಲ. ಈ ಮಸೂದೆಯಲ್ಲಿ ಯಾವಾಗಲೂ ಹೀಗೆ ಈ ಒಂದು ಸೆಕ್ಷನ್ 4 ನ್ನು ತಿದ್ದುಪಡಿಮಾಡುವುದಕ್ಕೆ ಸಭೆಯ ಮುಂದೆ ಪದೇ ಪದೇ ತರುತ್ತಲೇ ಇದ್ದಾರೆ. ಇದಕ್ಕೆ ಮೂಲ ಕಾರಣ ರಾಜಕೀಯವಲ್ಲದೆ ಮತ್ತೊಂದಿಲ್ಲ. ಮೊದಲು ಈ ಸೆಕ್ಷನ್ 4 ನ್ನು ತಿದ್ದುಪಡಿ ಮಾಡಿ ಅಲ್ಲಿ 500 ರೂಪಾಯಿಗಳು ಎಂದು ಇದ್ದುದನ್ನು 300 ರೂಪಾಯಿಗಳು ಎಂದು ತಿದ್ದುಪಡಿಮಾಡಿದರು. ಹಾಗೆ ತಿದ್ದುಪಡಿ ಆದದ್ದು 1966 ರಲ್ಲಿ. ಆ ತಿದ್ದುಪಡಿಗೆ ಮೂಲ ಕಾರಣ ಆಗ ಜನರಲ್ ಎಲೆಕ್ಷನ್‌ಗಳು ಇದ್ದವು ಅದಕ್ಕಾಗಿ 500 ರೂಪಾಯಿ ಇದ್ದದ್ದನ್ನು 300 ರೂಪಾಯಿಗೆ ಇಳಿಸಿದೆವು ಎಂದು ದೇಶದಲ್ಲೆಲ್ಲಾ ಪ್ರಚಾರ ಮಾಡಿದರು. ಆ ಚುನಾವಣೆಗಳು ಈಗ ಮುಗಿದಿವೆ. ಆದ್ದರಿಂದ ಆ ದಿವಸ ಕಡಮೆ ಮಾಡಿದ್ದ ತೆರಿಗೆಯನ್ನು ಮತ್ತೆ ಈ ದಿವಸ ಹೆಚ್ಚುಮಾಡೋಣ ಎಂದು ಮತ್ತೆ ಈದಿನ ಈ ತಿದ್ದುಪಡಿ ತದಿದ್ದಾರೆ ಅಷ್ಟೇ ಅಲ್ಲ ನಾವು ಈ ದಿವಸ ಈ 300 ರೂಪಾಗಳಿದ್ದದ್ದನ್ನು 500 ಕ್ಕೆ ಹೆಚ್ಚಿಸಿದರೂ ಕೂಡ ಇವನ್ನು ಹೀಗೆ ಹೆಚ್ಚಿಸಿದ್ದು ಇವತ್ತಲ್ಲ, ಇದನ್ನು ಎಂದು 300ಕ್ಕೆ ಇಳಿಸಲಾಗಿತ್ತೋ ಆ ದಿವಸದಿಂದಲೇ ಇದನ್ನು 500 ಕ್ಕೆ ಹೆಚ್ಚಿಸಲಾಗಿದೆ ಎಂದು ಪರಿಗಣಿಸಬೇಕು ಎಂತ ಬೇರೆ ತಿಳಿಸಲಾಗಿದೆ. ಇದು ಇನ್ನೂ ಸರಿಯಾದ್ದಲ್ಲ. ಮೊದಲು ಇದೇ ಸಭೆ ಒಂದಾವರ್ತಿ ವಿಚಾರವನ್ನು ಪರಿಶೀಲಿಸಿ 500 ರೂಪಾಯಿಗಳಿದ್ದದ್ದನ್ನು 300 ರೂಪಾಯಿಗಳಿಗೆ ಸರ್ಕಾರದವರು ತಂದಿದ್ದ ತಿದ್ದುಪಡಿಯನ್ನು ಅನುಮೋದಿಸಿದ ನಂತರ ಮತ್ತೆ ಅದನ್ನೇ ಈ ದಿವಸ 500 ಆ ದಿವಸದಿಂದಲೇ ಹೆಚ್ಚಿಸಲಾಗಿದೆ ಅನ್ನುವುದು ಸರ್ವಥಾ ಉಚಿತವಾದ್ದಲ್ಲ. ಮೇಲಾಗಿ ಈ ತಿದ್ದುಪಡಿಯು ನಮ್ಮ ಸ್ಕೋಪಿನಲ್ಲೂ ಬರುವುದಿಲ್ಲ. ಈ ದಿವಸ ಸರ್ಕಾರದವರು ಎತ್ತಲು ಹೊರಟಿರತಕ್ಕ ತೆರಿಗೆ ಏನಿದೆ ಅದು ವರ್ತಕರ ಮೇಲೆ ವಸೂಲಾಗದ ತೆರಿಗೆಯನ್ನು ಒಕ್ಕಲುತನದವರ ಕಡೆಯಿಂದ ಎತ್ತುವುದಕ್ಕೆ ಹೊರಟಂತೆ ಕಾಣುತ್ತಿದೆ. ಇವರಿಗೆ ದುಡ್ಡಿನ ಅಡಚಣೆ ಇದೆ, ಅದಕ್ಕೆ ಪ್ರಾಜೆಕ್ಟುಗಳ ಕೆಲಸ ನಿಧಾನವಾಗಿದೆ ಅನ್ನಬಹುದು. ಆದರೆ ಉದಾಹರಣೆಗೆ ಆ ಅಪ್ಪರ್ ಕೃಷ್ಣಾ ಯೋಜನೆಯನ್ನೇ ತೆಗೆದುಕೊಳ್ಳೋಣ. ಅದಕ್ಕೆಲ್ಲಾ ಸರ್ಕಾರದವರು ಈ ದಿವಸ ಮಾಡಿರತಕ್ಕ ಅಂದಾಜಿನ ಪ್ರಕಾರ ಅಲ್ಲಿ 19 ಲಕ್ಷ ಎಕರೆ ನೀರುಸಾಗುವಳಿಗೆ ಬರುತ್ತದೆ ಎಂದು ಇಟ್ಟುಕೊಂಡರೆ ಆ 19 ಲಕ್ಷ ಎಕರೆಗೂ ಎಕರೆ ಒಂದಕ್ಕೆ 500 ರೂಪಾಯಿಗಳ ಪ್ರಕಾರ ನೀರುಸರದಿಯನ್ನು ವಸೂಲ್ಮಾಡಿದರೆ ಅದು ಒಟ್ಟು ಎಷ್ಟಾಗುತ್ತದೆ? ಸರ್ಕಾರದವರು ಆ ಅಪ್ಪರ್ ಕೃಷ್ಣಾಕ್ಕೆ ಖರ್ಚುಮಾಡಬೇಕು ಎಂದಿರುವುದೆಲ್ಲಾ ಕೇವಲ 177—178 ಕೋಟಿ ಮಾತ್ರ. ಅಷ್ಟಕ್ಕೆ ಇವರು ಈ ದಿವಸ 500 ರೂಪಾಯಿಗಳಂತೆ ಎಕರೆ ಒಂದಕ್ಕೆ ಕಲೆಕ್ಟ್‌ಮಾಡುವುದು ನ್ಯಾಯವೇ? ಅದರೆ ಹಾಗೆ ಸರ್ಕಾರಕ್ಕೆ ಬರತಕ್ಕ ಹಣದಲ್ಲಿ ಕೆಲವು ಹಣ ತೀವ್ರವಾಗಿ ಬರಬಹುದು; ಇನ್ನು ಕೆಲವು ಕಂತುಗಳ ಪ್ರಕಾರ ಬರಬಹುದು. ಅಲ್ಲದೆ ಸರ್ಕಾರದವರು ಆ ಪ್ರಾಜೆಕ್ಟ್‌ಗಳನ್ನು ನಿರ್ಮಾಣ ಮಾಡಬೇಕಾದರೆ ಎಷ್ಟೇ ಕಡಮೆ ಅಂದರೂ 10—15 ವರ್ಷಗಳಿಗೆ ಕಡಮೆಯಾಗುವುದಿಲ್ಲ. ಈ ಅಂಶವನ್ನೂ ಕೂಡ ಅವರು ಪರಿಶೀಲನೆ ಮಾಡಿದಂತೆ ಕಾಣುವುದಿಲ್ಲ.

† **Sri D. PARAMESWARAPPA.**—Sir, if my friend Mr. Nagappa had understood the basis on which the present levy is made, I do not think that he would have advanced such a sort of argument at this stage. Under the present Act, the basis under which this levy is made has got a direct bearing on the increase in the market value of the land, as a result of the irrigation facilities that have been provided. Sir, my friend Mr. Nagappa need not assume that this rate will be uniform in all cases. I would like to convince my Hon'ble friend with this

(SRI D. PARAMESWARAPPA)

mathematical illustration. Before the irrigation facilities were provided, if we could assume that the value of the land was Rs. 500, I believe that my friend would not go to the extent of refuting that the value of the land has now increased because of the facilities provided and any person who owns such a land is expected to pay an enhanced contribution. For example, before any project or irrigation facility was provided if any land was valued at Rs. 500, after the irrigation facilities were provided, naturally, invariably the value of the land must increase. It may go up to Rs. 2000. I think my friend is also aware of concrete instances under the Bhadra project, where before irrigation facilities were provided, the land was worth hardly Rs. 500 per acre. Now, you may say that each acre costs something like Rs. 2 thousand and Rs. 3 thousand. So, in such cases the maximum limit may be Rs 500. But there are certain other cases where the increase is not considerable. For example, the value of the land prior to the irrigation works was Rs. 400. After the irrigation work, it is Rs. 1,000. Let the hon. Member deduct Rs 400 out of Rs. 1,000; it will be Rs. 600; half of it, namely, Rs. 300 he will have to pay.

Sri M. NAGAPPA.—My contention is this: I will give a concrete instance. Thungabhadra Project is in my district. Formerly, under the Thungabhadra Project, an acre of land was being sold for Rs. 300. Now it is Rs. 4,000. If Rs. 300 are deducted out of Rs. 4,000 and 50 per cent of it is put, the maximum is fixed an not more than Rs.500. There may be a fluctuation from land to land and in the cost and the market value. But one thing is definite. If one half of the increased value of the land, that is market value of the land, is put, then the amount that you are collecting as contribution, is something abnormal; it will not only contribute to the entire cost of the entire project but it will fetch something more. So this is not based on feasibility. Let the hon. Minister take the concrete instance of Bhadra Project; Let us take the cost of constrion of the entire project, and see how many acres of land are being cultivaed under that Project. Let us also take what the earlier market value of the particular lands was and what the increased value of those lands is — there may be a difference of Rs. 1,000. So you are recovering the entire cost of the project. Also you are making money by taking this contribution from the poor agirculturists. You are collecting from 12 to 20 time the cost. You are also levying the betternment tax by way of this water rate. The Government is doing business just like *Marwari* people.

ಈಗಿನ ಸರ್ಕಾರ ಮಾರವಾಡಿಗಿಂತ ಒಂದು ಕೈ ಹೆಚ್ಚಿಗೆ ಆಗಿದ್ದಾರೆ. ಹಿಂದೆ ಹೇಳುತ್ತಾ ಇದ್ದೆವು ಪಠಾಣರು ನೂರಕ್ಕೆ ಇಪ್ಪತ್ತು ರೂಪಾಯಿ ಬಡ್ಡಿ ತೆಗೆದುಕೊಳ್ಳುತ್ತಾರೆ ಎಂದು. ಈಗ ನೀವು ಪಠಾಣರುನ್ನು ಮೀರಿಸಿದ್ದೀರಿ. ನಾವು ಕಾಂಟ್ರಿಬ್ಯೂಟ್ ಮಾಡತಕ್ಕ ಕಾಂಟ್ರಿಬ್ಯೂಷನ್ ಏನಿದೆ ಅದು ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ಮಾತ್ರವಲ್ಲದೆ ಅದಕ್ಕಿಂತ ಹೆಚ್ಚಿನ ದುಡ್ಡು ಉಳಿಯುತ್ತದೆ. ಇದನ್ನು ಲೆಕ್ಕಪತ್ರ ಇಟ್ಟುಕೊಂಡು ತಿಳಿಸಿಕೊಡಿ, 300 ರಿಂದ 500 ಮಾಡಲಿಕ್ಕೆ ಸಿದ್ಧವಾಗಿದ್ದೇವೆ. ಅದನ್ನು ಬಿಟ್ಟು ಹಿಂದೆ ಒಂದು ಸಾರಿ 500 ರೂಪಾಯಿ ಅಂತ ನಿಗದಿಮಾಡಿ ಇದ್ದುದನ್ನು 300

ರೂಪಾಯಿಗೆ ಇಳಿಸಬೇಕಾದರೆ ಕಾರಣವೇನಿತ್ತು ? ರಾಜಕೀಯ ಕಾರಣ ಇತ್ತೇ ಅಥವಾ ಬೇರೆ ಏನಾದರೂ ಕಾರಣ ಇತ್ತೇ ? ವಾಸ್ತವಿಕವಾಗಿ ಈಗಿರತಕ್ಕ 300 ರೂಪಾಯಿ ಕೂಡ ಬಹಳ ಹೆಚ್ಚಿನದಾಗಿದೆ, ಇದನ್ನು ಈಗ 500 ರೂಪಾಯಿ ಅಂತ ಮಾಡಿ. ಇದು ಜನರಿಗೆ ಹೊರೆಯಾಗಕೂಡದು ಎಂಬುದು ನನ್ನ ಒಂದು ಕಳಕಳಿಯ ಬೇಡಿಕೆ.

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇವತ್ತು ಪ್ರಾಜೆಕ್ಟುಗಳನ್ನು ಕಟ್ಟಿಸುತ್ತೀರಿ, ನೀರು ಕೊಡುತ್ತೀರಿ, ಆಕ್ಟ್ ಪ್ರಕಾರ ಸ್ಲೂಯಿಸಸ್ ಓಪನ್ ಮಾಡಿ ಇಷ್ಟು ಕ್ಯೂಸೆಕ್ಸ್ ಆಫ್ ವಾಟರ್ ಕೊಡುತ್ತೇವೆ ಎಂದು ಹೇಳುತ್ತೀರಿ. ಟೇಲ್ ಎಂಡ್‌ನಲ್ಲಿರತಕ್ಕವನಿಂದಲೂ ಕೂಡ ಜುಮಾದಾರಿ ಮಾಡಿ ನೀರು ಕೊಡುತ್ತೇವೆ ಅಂತ ಹೇಳಿ ಅವನಿಂದ ಹಣ ವಸೂಲು ಮಾಡಿದ್ದೀರಿ. ಅದೂ ಅಲ್ಲದೇ ಪಂಚಾಯಿತ್ತು ಮಾಡಿಕೊಳ್ಳಿ, ನೀವು ನೀವೇ ಸರಿಪಡಿಸಿಕೊಳ್ಳಿ, ಕಟ್ಟಕಡೆಯಲ್ಲಿರತಕ್ಕವರಿಗೆ ಹೆಚ್ಚು ನೀರು ಬಿಟ್ಟುಕೊಳ್ಳಿ ಎಂದು ಹೇಳುತ್ತೀರಿ. ತುಂಗಭದ್ರಾ ಪ್ರಾಜೆಕ್ಟಿನ ಟೇಲ್ ಎಂಡ್ ಲ್ಯಾಂಡ್ ಇರುವುದು ರಾಯಚೂರಿನಲ್ಲಿ, ಅಲ್ಲಿಗೆ ಯಾವ ಆಧಾರದ ಪ್ರಕಾರ ಇಷ್ಟು ಕ್ಯೂಸೆಕ್ಸ್ ಆಫ್ ವಾಟರ್ ಕೊಡುತ್ತೇವೆ ಅಂತ ಹೇಳಿ ಗ್ಯಾರಂಟಿ ಕೊಡುತ್ತೀರಿ ? ಅಪ್ಪರ್ ರೀಜನ್‌ನಲ್ಲಿರತಕ್ಕವನಿಗೂ ಒಂದೇ ರೀತಿಯ ಕಾಂಟ್ರಿಬ್ಯೂಷನ್, ಏನೂ ನೀರು ಕೊಡದೇ ಇರತಕ್ಕವನಿಗೂ ಒಂದೇ ರೀತಿಯ ಕಾಂಟ್ರಿಬ್ಯೂಷನ್ ಈ ರೀತಿ ಆಕ್ಟ್ ಪ್ರಕಾರ ಇದೆ. ಇದರಿಂದ ಒಂದು ರೀತಿಯ ತಾರತಮ್ಯ ವುಂಟಾಗಿ, ಕೆಳಭಾಗದಲ್ಲಿರತಕ್ಕ ಎಂದರೆ ಟೇಲ್ ಎಂಡ್‌ನಲ್ಲಿರತಕ್ಕ ರೈತರ ಮೇಲೆ ಒಂದು ದೊಡ್ಡ ಹಾನಿಯಾಗುತ್ತದೆ. ಆದ್ದರಿಂದ ಈ ತಿದ್ದುಪಡಿ ತರುವುದು ಅನುಚಿತ, ಇದಕ್ಕೆ ರಿಟ್ರಾಸ್ಪೆಕ್ಟೀವ್ ಆಪರೇಷನ್ ಕೂಡ ಕೊಡಬಹುದು. ಈಗಿರುವ 300 ರೂಪಾಯಿಗಳೇ ಬಹಳ ಹೆಚ್ಚಿನದು ಎಂದು ಹೇಳಿ ಈ ಬಿಲ್ಲನ್ನು ತೀವ್ರವಾಗಿ ವಿರೋಧಿಸುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಈ ಮಸೂದೆ ಬಹಳ ಸಾಧುವಾದುದು, ಮತ್ತು ಇದರ ಬಗ್ಗೆ ಹೆಚ್ಚು ಚರ್ಚೆ ಇಲ್ಲದೆ ಒಪ್ಪಿಕೊಳ್ಳಬೇಕಾಗುತ್ತದೆ ಎಂದು ನನ್ನ ಭಾವನೆ. ಶ್ರೀಮಾನ್ ನಾಗಪ್ಪನವರು ಬಹಳವಾಗಿ ಇದನ್ನು ವಿರೋಧಿಸುತ್ತೇನೆ ಎಂದು ಹೇಳಿ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಮೊದಲನೆಯ ಕಾರಣ, ಸರ್ಕಾರದವರು ರೈತರಿಂದ ಎಕರೆಗೆ ಇಷ್ಟು ಅಂತ ಹಣ ಪಡೆಯುತ್ತಾ ಇರುವುದು — ವ್ಯಾಪಾರ ಮಾಡುತ್ತಾ ಇದ್ದೀರಿ — ಅವರಿಗೆ ಖರ್ಚು ಮಾಡುವ ಹಣಕ್ಕಿಂತ ಹೆಚ್ಚು ಹಣ ತೆಗೆದುಕೊಳ್ಳುತ್ತಾ ಇದ್ದೀರಿ ಎನ್ನುವ ಮಾತನ್ನು ಅವರು ತಿಳಿಸಿದರು. ಅವರು ಇದರ ಲೆಕ್ಕಾಚಾರ ಹೇಗೆ ಹಾಕಿಕೊಂಡರೋ ಗೊತ್ತಿಲ್ಲ. ಅವರ ಲೆಕ್ಕಾಚಾರದಲ್ಲಿ ಯಾವುದಾದರೂ ಒಂದು ಪ್ರಾಜೆಕ್ಟನ್ನು ಕಟ್ಟಿದಾಗ ಅದಕ್ಕೆ ಖರ್ಚು ಮಾಡಿದಂತಹ ಹಣ ಎಲ್ಲವೂ ಬೆಟರ್‌ಮೆಂಟ್ ಲೆವಿಯಿಂದ ಬರುತ್ತದೆ ಎಂದು ಅವರಿಗೆ ಲೆಕ್ಕ ಸಿಕ್ಕಿತು ಎಂದು ಕಾಣುತ್ತದೆ. ಅದನ್ನು ಯಾವ ರೀತಿ ಲೆಕ್ಕಹಾಕಿದರು ಎಂಬುದನ್ನು ಅವರು ಹೇಳಲಿಲ್ಲ. ಹೆಚ್ಚು ಹಣ ತೆಗೆದುಕೊಳ್ಳುತ್ತಾ ಇದ್ದೀರಿ ಎಂದು ಹೇಳಿದರು. ಈಗ ನಮ್ಮ ದೇಶದಲ್ಲಿ ಕಟ್ಟಿರತಕ್ಕ ಪ್ರಾಜೆಕ್ಟು, ಕಟ್ಟಬೇಕಾದ ಪ್ರಾಜೆಕ್ಟು ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈ ಲೆಕ್ಕ ತೆಗೆದುಕೊಳ್ಳೋಣ. ಕಯ್ಯಲ್ಲಿರುವ ಹುಣ್ಣಿಗೆ ಕನ್ನಡಿ ಏಕೆ ಅಂತ ಇದರ ಬಗ್ಗೆ ವಾದವಿವಾದವೇ ಇಲ್ಲ. ತುಂಗಭದ್ರಾ ಪ್ರಾಜೆಕ್ಟು ಇದೆ, ನಮ್ಮಲ್ಲಿ ಹಳೆಯ ಪ್ರಾಜೆಕ್ಟಾದ ಕೃಷ್ಣರಾಜಸಾಗರ ಪ್ರಾಜೆಕ್ಟು ಇದೆ. ಕಪಿನಿ ಪ್ರಾಜೆಕ್ಟು ನಡೆಯುತ್ತಾ ಇದೆ. ಹೇಮಾವತಿ ಪ್ರಾಜೆಕ್ಟಿಗೆ ಎಷ್ಟಾಗಬಹುದು ಎಂಬುದನ್ನು ಅಂದಾಜು ಮಾಡಿದ್ದಾರೆ, ಹೀಗೆಯೇ ಘಟಪ್ರಭಾ ಪ್ರಾಜೆಕ್ಟು ಇದೆ. ಈ ಪ್ರಾಜೆಕ್ಟುಗಳಿಗೆ ಎಷ್ಟೆಷ್ಟು ದುಡ್ಡು ಖರ್ಚಾಗುತ್ತದೆ !

ಶ್ರೀ ಎಚ್. ಡಿ. ದೇವೇಗೌಡ.—ಈಗ ವಾಣಿವಿಲಾಸ ಸಾಗರದ ಉದಾಹರಣೆ ತೆಗೆದುಕೊಳ್ಳಿ ಪ್ರಾಜೆಕ್ಟ್ ಕಟ್ಟಿ ನೀರು ಇಲ್ಲದೇ ಹೋದಾಗ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಟ್ಟಿರುವುದು ವಾಪಸು ಕೊಡಿಸುತ್ತೀರಾ ?

4-00 P.M.

ಶ್ರೀ ಡಿ. ದೇವರಾಜ ಅರಸ್.—ನೀರಿಲ್ಲದಿರುವಾಗ ಜಮೀನನ್ನು 200 ರೂಪಾಯಿಗಳಿಗೆ ಕೊಡಿಸುತ್ತಾರೆಯೇ ಎಂದು ಕೇಳಿದರು, ಅದಕ್ಕೆ ಉತ್ತರ ಹೇಳುತ್ತೇನೆ. ವಾಣಿವಿಲಾಸ ಸಾಗರದ ಕೆಳಗೆ ಸುಮಾರು 20 ಸಾವಿರ ಎಕರೆ ನೀರಾವರಿ ಜಮೀನಿರಬಹುದು. ಈಗ ನೀರಿಲ್ಲ, ಅಲ್ಲಿನ ಆ ಜಮೀನನ್ನು ಖುಷ್ಕಿ ದರಕ್ಕೆ ಕೊಟ್ಟರೆ ಸರಕಾರ ವಹಿಸಿಕೊಳ್ಳುತ್ತದೆ. ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಹಾಗೆಯೇ ಬೇರೆ ಪ್ರಾಜೆಕ್ಟುಗಳಿವೆ, ಕೃಷ್ಣರಾಜಸಾಗರ ಪ್ರಾಜೆಕ್ಟಿದೆ, ಅದಕ್ಕೆ ಖರ್ಚು ಸುಮಾರು 4 ಕೋಟಿ ರೂಪಾಯಿ ಆಗಿರಬಹುದು, ಅದರ ಕೆಳಗೆ ಒಂದು ಲಕ್ಷ 25 ಸಾವಿರ ಎಕರೆ ನೀರಾವರಿಯಾಗಬಹುದು. ಅದಕ್ಕೆ ಆಗಿನ ಕಾಲದಲ್ಲಿ ಎಕರೆಗೆ 250 ರೂಪಾಯಿಗಳಂತೆ ಕಾಂಟ್ರಿ

(ಶ್ರೀ ಡಿ. ದೇವರಾಜ ಅರಸ್)

ಬ್ಯೂಷನ್ ತೆಗೆದುಕೊಂಡಿರಬಹುದು. 1930ನೆಯ ಇಸವಿಗೆ ಮುಂಚೆ ಕಟ್ಟಿದ್ದಕ್ಕೆ ಅಷ್ಟು ತೆಗೆದುಕೊಂಡಿದ್ದಾರೆ. ಪ್ರಿನ್ಸಿಪಲ್ ಏನಿದೆ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕು ಎಂಬುದು ಅದನ್ನು ತೆಗೆದುಕೊಂಡು ವಾದವಿವಾದಮಾಡುವುದು, ಹಾಗೆ ಮಾಡಿ ಅದು ತಪ್ಪು ಅಥವಾ ಸರಿ ಎಂದು ಹೇಳುವ ಪ್ರಶ್ನೆ ಏಳುವುದಿಲ್ಲ. ಸರಕಾರದವರು ಹೆಚ್ಚು ವಸೂಲುಮಾಡುತ್ತಿದ್ದಾರೆ ಎಂದು ಹೇಳುವುದು ಸರಿಯಲ್ಲ ಸರಕಾರಕ್ಕೆ ಖರ್ಚಿಗೆ ಹಣ ಬೇಕಾಗಿದೆ. ಅದನ್ನು ಕೊಟ್ಟು ಯೋಜನೆ ಜಾಗ್ರತೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಸರಕಾರದ ಬೊಕ್ಕಸದಿಂದ ಹಣ ಖರ್ಚು ಮಾಡಬೇಕು, ರೈತರಿಂದ ಏಕೆ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಇದು ಬಹಳ ಸ್ವಾರಸ್ಯವಾಗಿದೆ. ರೈತರಲ್ಲಿ ನಾನಾ ರೀತಿಯ ಜನರಿದ್ದಾರೆ. ರೈತರಲ್ಲಿ ದೊಡ್ಡವರು ಸಣ್ಣವರು ಎಲ್ಲರೂ ಇದ್ದಾರೆ. ಮೀನುಗಳಲ್ಲಿ ಸಣ್ಣದು, ದೊಡ್ಡದು, ತಿಮಿಂಗಿಲ ಇರುವಂತೆ ರೈತರಲ್ಲೂ ಇದ್ದಾರೆ. ತರ್ಕಶಾಸ್ತ್ರದಲ್ಲಿ ಮತ್ಸ್ಯನ್ಯಾಯ ಎಂದು ಹೇಳುವುದುಂಟು ದೊಡ್ಡ ಮೀನು ಸಣ್ಣ ಮೀನನ್ನು ನುಂಗಿ ಬದುಕುವುದು ಪ್ರಾಜೆಕ್ಟಿನಿಂದ ಅನುಕೂಲ ಪಡೆಯುವವರ ಸಂಖ್ಯೆ ನೋಡಬೇಕು. ಕಾವೇರಿ, ಕಪಿನಿ, ಕೃಷ್ಣ, ಘಟಪ್ರಭ ಮುಂತಾದ ನದಿಗಳಿಂದ ಮಾಡಿರುವ ಪ್ರಾಜೆಕ್ಟುಗಳಿಂದ ಅನುಕೂಲ ಪಡೆಯುವವರ ಸಂಖ್ಯೆ ಎಷ್ಟು ಎಂದು ನೋಡಬಹುದು. ಇರುವ ನದಿಗಳ ನೀರನ್ನೆಲ್ಲಾ ಉಪಯೋಗಿಸಿಕೊಂಡರೆ ಎಷ್ಟು ನೀರಾವರಿಯಾಗಬಹುದು ಎಂದು ಯೋಚನೆಮಾಡಿದರೆ ಸುಮಾರು ಸೇಕಡ 20 ಭಾಗ ನೀರಾವರಿಯಾಗಬಹುದು. ಈಗ ಸೇಕಡ 8 ರಷ್ಟು ನೀರಾವರಿ ಇದೆ. ಇರುವ ನೀರಿನ ಸೌಕರ್ಯವೆಲ್ಲಾ ಉಪಯೋಗ ಮಾಡಿಕೊಂಡರೂ ಕೂಡ ಇನ್ನೂ ಸೇಕಡ 80 ಭಾಗ ಭೂಮಿ ನೀರಿನ ಸೌಕರ್ಯವಿಲ್ಲದೆ ಮಳೆಯ ಆಸರೆಯಿಂದಲೇ ಸಾಗುವಳಿಯಾಗ ಬೇಕಾಗುತ್ತದೆ. ಎಷ್ಟೇ ಸೌಕರ್ಯ ಮಾಡಿದರೂ ಕೂಡ ದೇಶದಲ್ಲಿರುವ ರೈತರ ಸಂಖ್ಯೆ ನೋಡಿದರೆ ಸೇಕಡ 25 ಜನರಿಗೆ ಸೌಕರ್ಯವಾಗಬಹುದು, ಉಳಿದ ಸೇಕಡ 75 ಭಾಗ ಜನರು ನೀರನ್ನು ಪಡೆಯಲು ಸಾಧ್ಯವಿಲ್ಲ. ಖುಷ್ಕಿ ಜಮೀನು ಹೊಂದಿರುವವರಿಗೆ ಮಾಡುವ ಪ್ರಾಜೆಕ್ಟುಗಳಿಂದ ಸಹಾಯವಾಗುವುದಿಲ್ಲ. ಆದರೆ ಅವರೆಲ್ಲಾ ಹಣ ಕೊಟ್ಟಿಲ್ಲವೇ ? ಯೋಜನೆಗಳನ್ನು ಮಾಡಿದಾಗ ಅನೇಕ ಕಾರಣಗಳಿಂದ ಜಮೀನಿನ ಬೆಲೆ ಹೆಚ್ಚುತ್ತದೆ; 3–4 ಸಾವಿರ ರೂಪಾಯಿಗಳವರೆಗೂ ಏರುತ್ತದೆ. 200 ರೂಪಾಯಿ ಬೆಲೆ ಇರುವ ಜಮೀನಿಗೆ 3 ಸಾವಿರ ರೂಪಾಯಿ ಬೆಲೆ ಬರುತ್ತದೆ. ತುಂಗಭದ್ರ ಪ್ರಾಜೆಕ್ಟ್ ಆದಮೇಲೆ ಅದರ ಕೆಳಗಿರುವ ನೀರಾವರಿ ಜಮೀನಿನ ಬೆಲೆ ಏರಿದೆ, ಸರಕಾರದ ಸಹಾಯದಿಂದ ಆ ರೀತಿ ಆಗಿದೆ.

ಸರ್ಕಾರದ ದುಡ್ಡು ಪ್ರತಿಯೊಬ್ಬ ಪ್ರಜೆಗೂ ಸೇರಿದ್ದೇ. ಅದರಿಂದ ನೇರವಾಗಿ ಫಾಯದೆ ಏನಾಗುತ್ತದೆ ಎನ್ನುವುದಕ್ಕೆ ಉತ್ತರ ಹೇಳುತ್ತೇನೆ. ಅವರಿಗೆ ಏನೂ ಆಗುವುದಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಜನರಿದ್ದಾರೆ. ಕೃಷ್ಣರಾಜಸಾಗರವನ್ನು ದೇಶದ ಹಣ ಖರ್ಚು ಮಾಡಿ ಕಟ್ಟಿದರು. ಅದಕ್ಕೆ ಅದರ ಉಪಯೋಗ ಪಡೆಯುವವರು ಕಾಂಟ್ರಿಬ್ಯೂಷನ್ ಕೊಡಲಿಲ್ಲವೋ ? ಕಾಂಟ್ರಿಬ್ಯೂಷನ್ ಕೊಡತಕ್ಕದು ಹೊಸ ನೀತಿಯಲ್ಲ, ಅನೂಚಾನವಾಗಿ ನೂರಾರು ವರ್ಷಗಳಿಂದ ಬಂದಿರುವ ನೀತಿ, ಸಾರ್ವತ್ರಿಕವಾಗಿ ಒಪ್ಪಿರತಕ್ಕ ನೀತಿ. ಇವೊತ್ತು ಕಾಂಟ್ರಿಬ್ಯೂಷನ್ ಏಕೆ ಕೊಡಬೇಕು ಅಥವಾ ಹೆಚ್ಚು ಏಕೆ ತೆಗೆದುಕೊಳ್ಳುತ್ತಾರೆಂದರೆ ಅದನ್ನು ಕೇಳುವವರಿಗೇ ಅರ್ಥವಾಗಿಲ್ಲ.

300 ರೂಪಾಯಿಗಳಿಂದ 500 ರೂಪಾಯಿಗಳಿಗೆ ಹೆಚ್ಚಿಸುವ ವಿಷಯವನ್ನು ತೆಗೆದುಕೊಂಡರೆ, ಸರ್ಕಾರ ಮಾಡಿದಂಥ ಕೆಲಸಕಾರ್ಯಗಳ ಪರಿಣಾಮವಾಗಿ ಒಂದು ಜಮೀನು ನೀರಾವರಿಗೆ ಬಂದು, ಅದರ ಬೆಲೆ ಜಾಸ್ತಿಯಾಗುವುದಲ್ಲದೆ ಅದರಿಂದ ಅಪ್ಪ್ಯೂರ್ಡ್ ಇನ್‌ಕಮ್ ಬರುವುದಕ್ಕೆ ದಾರಿಯಾಗುತ್ತದೆ. ನೀರು ಜಮೀನಿಗೆ ಪ್ರತಿವರ್ಷವೂ ಸಿಕ್ಕುವುದರಿಂದ ಮೂರು ನಾಲ್ಕು ವರ್ಷಗಳಲ್ಲಿ ರೈತನಾದವನು ಚೇತರಿಸಿಕೊಂಡು ಅವರಿಗೆ ಅನುಕೂಲವಾಗುವುದಕ್ಕೆ ಅವಕಾಶವಿದೆ. ಬರೀ ಖುಷ್ಕಿ ಜಮೀನಿನಲ್ಲಿ ಕೆಲಸ ಮಾಡಿಕೊಂಡಿರುವವನಿಗೆ ತಲೆತಲಾಂತರವಾಗಿ ಎಷ್ಟೇ ಕಷ್ಟ ಪಟ್ಟರೂ ಒಂದು ಹೆಜ್ಜೆ ಮುಂದೆ ಇಡುವುದಕ್ಕೆ ಆಗುತ್ತಿಲ್ಲ. ಅವರಿಗೆ ಅಂಥ ತೊಂದರೆ ಇರುವಾಗ ಜಮೀನಿಗೆ ನೀರು ಬಂದು ಅದರಿಂದ ಅವನ ಜೀವನ ಉತ್ತಮವಾಗಿ, ಸಂಪಾದನೆಯ ಶಕ್ತಿ ಜಾಸ್ತಿಯಾಗಿ ಅವನ ಭೂಮಿಗೆ ಹೆಚ್ಚು ಬೆಲೆ ಬರುತ್ತದೆ. 200 ರೂಪಾಯಿ ಬೆಲೆ ಬಾಳುವಂಥ ಭೂಮಿ ಬೆಲೆ ಮೂರು ನಾಲ್ಕು ಸಾವಿರ ರೂಪಾಯಿ ಆಗುತ್ತದೆ. ಹೀಗಿರುವಾಗ ಸರ್ಕಾರಕ್ಕೆ ಒಂದೇ ಒಂದು ಸಲ ಇಷ್ಟು ದುಡ್ಡು ಕೊಡಿ, ಸಾರ್ವತ್ರಿಕವಾದ ಹಣವನ್ನು ಖರ್ಚು ಮಾಡಿರುವುದರಿಂದ ನಿಮಗೆ ಅನುಕೂಲವಾಗಿದೆ, ಅದಕ್ಕಾಗಿ ಸ್ವಲ್ಪ ದುಡ್ಡು ಕೊಡಿ ಎಂದು ಕೇಳುವುದರಲ್ಲಿ ತಪ್ಪೇನಿದೆ ? ಈ ಸಂದರ್ಭದಲ್ಲಿ ಹಿಂದೆ ನಡೆದಂಥ ಘಟನೆಗಳನ್ನು ಜ್ಞಾಪಕಕ್ಕೆ ತರುವುದು ಉತ್ತಮವೆಂದು ಕಾಣುತ್ತದೆ. 1957 ನೇ ಇಸವಿಯಲ್ಲಿ ಅಥವಾ 1958ನೇ ಇಸವಿಯಲ್ಲಿ ಇದರ ಬಗ್ಗೆ ಒಂದು ಕಾನೂನು ಬಂತು. ಆ ಕಾನೂನು ಪ್ರಕಾರ ಎಕರೆಗೆ ಕೆಲವು ಪ್ರಾಜೆಕ್ಟ್‌ಗಳಲ್ಲಿ ಒಂದು ಸಾವಿರ ರೂಪಾಯಿಗಳವರೆಗೆ ಕಾಂಟ್ರಿಬ್ಯೂಷನ್

ತೆಗೆದುಕೊಳ್ಳಬೇಕೆಂದು ಮಾಡಿದ್ದು ಜ್ಞಾಪಕವಿದೆ. ಆಗ ಅದನ್ನು ಕಡಮೆ ಮಾಡಬೇಕಾಯಿತು. ಆಗ 300 ರೂಪಾಯಿ ಮಾಡಿದ್ದುದನ್ನು 500 ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಈಗ ತಿದ್ದುಪಡಿಯನ್ನು ತಂದಿದ್ದಾರೆ. 500 ರೂಪಾಯಿ ಎಂದು ಮಾಡಿರುವುದು ಬಹಳ ಹೆಚ್ಚು ಎಂದು ಮಾನ್ಯ ಸದಸ್ಯರು ಕೆಲವರು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಈಗ ಸೂಚಿಸಿರುವಂತೆ 500 ರೂಪಾಯಿ ತೆಗೆದುಕೊಂಡರೆ ಸಾಲುವುದಿಲ್ಲ, ಇನ್ನೂ ಹೆಚ್ಚು ತೆಗೆದುಕೊಳ್ಳಬೇಕು.

ಶ್ರೀ ಎಂ. ಜಿ. ಬಣಕಾರ್ (ಬ್ಯಾಡಗಿ).—ಬೆಟರ್‌ಮೆಂಟ್ ಲೆವಿ ವಿಷಯದಲ್ಲಿ ಬಹಳ ಚೆನ್ನಾಗಿ ಮಾನ್ಯ ಸದಸ್ಯರು ವಾದ ಮಾಡುತ್ತಿದ್ದಾರೆ ಸರ್ಕಾರದಿಂದ ಪ್ರಾರಂಭಿಸಿರತಕ್ಕ 15 ಪ್ರಾಜೆಕ್ಟ್‌ಗಳಿಗೆ 80 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದರಿಂದ 13 ಲಕ್ಷ ಎಕರೆ ನೀರಾವರಿಯಾಗಬಹುದು ಎಂದು ನಿರೀಕ್ಷೆ ಮಾಡಿದ್ದು ಕೇವಲ ನಾಲ್ಕು ಲಕ್ಷ ಎಕರೆ ಮಾತ್ರ ನೀರಾವರಿಯಾಗಿದೆ. ಹೀಗೆ ಯೋಜನೆಗಳನ್ನು ಮಾಡುವಾಗ ಜನರು ದುಡ್ಡು ನಿಷ್ಕ್ರಿಯತೆಯಲ್ಲಿ ಕೊಡುವುದಕ್ಕೆ ಭಯ ಬಡುತ್ತಾರೆ. ಅದರ ಬಗ್ಗೆ ಏನಾದರು ಇದ್ದರೆ ಹೇಳುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಕೃಷ್ಣರಾಜ ಸಾಗರದಿಂದ 1,25,000 ಎಕರೆಗೆ ನೀರಾವರಿಯಾಗಬೇಕೆಂದು ಅದನ್ನು ಕಟ್ಟುವಾಗ ಅಂದಾಜು ಮಾಡಿತ್ತು. ಇವೊತ್ತು 1,80,000 ಎಕರೆಗೆ ನೀರಾವರಿಯಾಗುತ್ತಿದೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಭದ್ರ ಮತ್ತು ತುಂಗ ಪ್ರಾಜೆಕ್‌ಗಳ ವಿಷಯವೆಂದು ಕಾಣುತ್ತದೆ. ಅವುಗಳಿಗೆ ಸಂಬಂಧಪಟ್ಟ ಹಾಗೆ ಸಂಪೂರ್ಣವಾದ ಮಾಹಿತಿ ನನ್ನಲ್ಲಿಲ್ಲ. 14 ಲಕ್ಷ ಎಕರೆ ಅಂದಾಜು ಹಾಕಿದ್ದು ಅದಕ್ಕಿಂತ ಕಡಿಮೆಯಾಗಿದ್ದರೆ ಅದಕ್ಕೆ ಕಾರಣ ಬಹುಶಃ ಫೀಡಿಂಗ್ ಚಾನೆಲ್ಸ್, ಮೇನ್ ಚಾನಲ್ಸ್ ಇವುಗಳನ್ನು ಪೂರೈಕೆ ಮಾಡಲಿಲ್ಲವೊ ಏನೋ. ಹೆಚ್ಚು ಮಾಹಿತಿ ನನ್ನಲ್ಲಿ ಇಲ್ಲದೆ ಇರುವುದರಿಂದ ಅದರ ಬಗ್ಗೆ ನಾನು ಹೇಳುವುದು ಉಚಿತವಲ್ಲ. ಸಂಬಂಧಪಟ್ಟ ಮಂತ್ರಿಗಳಲ್ಲಿ ವಿವರಗಳಿದ್ದರೆ ಅವರು ತಿಳಿಸಲಿ. ಈ ಪ್ರಾಜೆಕ್ಟಗಳನ್ನು ಮಾಡುವಾಗ 14 ಲಕ್ಷ ಎಕರೆಗೆ ನೀರಾವರಿಯಾಗುತ್ತದೆ ಎಂದು ಇಂಜಿನಿಯರುಗಳು ಅಂದಾಜು ಮಾಡಿದ್ದರೆ ಅಷ್ಟು ಆಗುವುದಿಲ್ಲ ಎಂದು ಹೇಳುವುದು ಸರಿಯಾದ ಮಾತಾಗಲಾರದು. ಇಂಜಿನಿಯರುಗಳು 14 ಲಕ್ಷ ಎಕರೆ ಆಗುತ್ತದೆ ಎಂದರೆ ಅದಕ್ಕಿಂತ ಒಂದು ಲಕ್ಷ ಎಕರೆ ಜಾಸ್ತಿಯಾಗುತ್ತದೆಯೇ ಹೊರತು ಎಂದಿಗೂ ಕಡಿಮೆಯಾಗಲಾರದು. ಕೆಲಸ ಮಾಡುತ್ತಿರಬೇಕಾದರೆ ನಿಧಾನವಾಗಿ ಅಥವಾ ಸರಿಯಾದ ರೀತಿಯಲ್ಲಿ ಕೆಲಸಕಾರ್ಯಗಳು ನಡೆಯುವ ನಿಧಾನವಾಗಿ ಅಷ್ಟು ಭೂಮಿಗೂ ನೀರನ್ನು ಪೂರೈಸುವುದಕ್ಕೆ ಆಗದೆ ಇರಬಹುದು. ಆದರೆ ಅಷ್ಟು ಎಕರೆಗೆ ನೀರಾವರಿಯಾಗುವುದಿಲ್ಲ ಎಂದು ಹೇಳುವುದು ಸರಿಯಾಗಲಾರದು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಕಾಂಟ್ರಿಬ್ಯೂಷನ್ 500 ರೂಪಾಯಿ ಏಕೆ ಮಾಡಬಾರದು ಎಂದು ನಾನು ಹೇಳುತ್ತಿದ್ದೇನೆ. ಒಂದು ಸಾವಿರ ರೂಪಾಯಿ ಇದ್ದುದನ್ನು 300 ರೂಪಾಯಿಗೆ ಇಳಿಸಿದ್ದು ಈಗ ಅದನ್ನು 500 ರುಪಾಯಿ ಮಾಡಬೇಕೆಂದು ಮಸೂದೆಯಲ್ಲಿ ನಮೂದು ಮಾಡಿದ್ದಾರೆ. ನಾನು ವೈಯಕ್ತಿಕವಾಗಿ ಹೇಳುವುದಾದರೆ ಒಂದು-ಸಾವಿರ ರೂಪಾಯಿ ಎಂದು ಸೂಚಿಸಿದ್ದುದನ್ನು 300 ರೂಪಾಯಿಗಳಿಗೆ ಇಳಿಸಬೇಕು ಎಂದು ಯಾವಾಗ ಬಂತೋ ಅಂದಿನಿಂದಲೂ ಅದಕ್ಕೆ ನಾನು ವಿರೋಧವಾಗಿದ್ದವನೇ ಮತ್ತು ಈಗಲೂ ಕೂಡ 500 ರೂಪಾಯಿ ಸಾಲದು ಎನ್ನುವುದೇ ನನ್ನ ಅಭಿಪ್ರಾಯ. ಯಾವ ರೈತನಿಗೆ ಕಟ್ಟತಕ್ಕ ಪ್ರಾಜೆಕ್ಟಿನಿಂದ ನೀರು ಬಂದು ಅನುಕೂಲವಾಗುತ್ತದೆ ಆ ರೈತ ಮಾತ್ರ ಈ ಹಣವನ್ನು ಕೊಡುತ್ತಾನೆ; ಎಲ್ಲರೂ ಕೊಡುವುದಿಲ್ಲ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಯಾವುದಾದರೂ ಪ್ರಾಜೆಕ್ಟ್ ಕೆಳಗಡೆ ಭೂಮಿ ನಿಮಗೆ ಇದ್ದರೆ, ಆ ಭೂಮಿಗೆ ನೀರು ಬರುವುದಾದರೆ ನೀವು ಮಾತ್ರ ಕೊಡುತ್ತೀರಿ, ಇಲ್ಲದೆ ಹೋದರೆ ಇಲ್ಲ.

ಪ್ರಾಜೆಕ್ಟ್‌ಗಳನ್ನು ತಯಾರು ಮಾಡುವಾಗ ಯಾವ ಯಾವ ಭೂಮಿಗೆ ನೀರು ಬರುತ್ತದೆ ಎಂದು ನಮ್ಮ ಇಂಜಿನಿಯರುಗಳು ಲೆಕ್ಕ ಹಾಕಿರುತ್ತಾರೆ. ಅದರ ಪ್ರಕಾರ ಆ ಜಮೀನುಗಳಿಗೆ ನೀರು ತಲುಪಲೇ ಬೇಕು. ಇಲ್ಲದೆ ಹೋದರ ನಮ್ಮ ಇಂಜಿನಿಯರುಗಳೆಲ್ಲ ಹೆಡ್ಡರೋ, ದಡ್ಡರೋ ಎಂದು ಹೇಳಬಹುದು.

ಶ್ರೀ ಎಂ. ಜಿ. ಬಣಕಾರ್.—ಮೈಸೂರು ರಾಜ್ಯದಲ್ಲಿ ತಜ್ಞರಾದ ಇಂಜಿನಿಯರುಗಳಿಲ್ಲ ಎಂದು ಕೇಂದ್ರ ಸರ್ಕಾರದವರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಇಂಡಿಯಾ ದೇಶದಲ್ಲಿ ಮೈಸೂರು ಇಂಜನೀಯರ್ಸ್ ಎಂದರೆ ಹೆಸರುವಾಸಿಯಾಗಿದ್ದಾರೆ. ಮೈಸೂರು ದೇಶದಲ್ಲ ತಯಾರಾದಂಥ ಇಂಜಿನಿಯರ್ಸ್ ಇಂಡಿಯಾ ದೇಶದ ಹೊರಗೂ ಹೋಗಿ ಖ್ಯಾತಿಯನ್ನು ಪಡೆದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಈ ಬಿಲ್ಲಿಗೆ ಇನ್ನು ಎರಡು ದಿವಸ ಹೆಚ್ಚಿಗೆ ಅಲಾಟ್ ಮಾಡಿದರೆ ಏನಾಗುತ್ತದೆ ?

Mr. SPEAKER.—The hon. Member Sri Bangarappa is interrupting the hon. Member Sri Devaraja Urs at every stage and he is not able to continue his speech. There is a limit to it. Besides we are working subject to the limitation of time. After all, it is a small Bill.

Sri D. B. KALMANKAR.—Though it is a small Bill, it is an important Bill and as such I request the Chair to give sufficient time for it.

Mr. SPEAKER.—How many days are required for it ?

Sri S. BANGARAPPA.—This Bill pertains to an urgent matter of public importance and as such I request the Chair to allot two more days for it.

Mr. SPEAKER.—The Business Advisory Committee has alloted one day for two Bills and another day for the remaining three Bills. This House has also approved the report of the Business Advisory Committee. In view of that, what can the Chair do ? Probably, the House is adjourning on the 18th or 19th.

Sri S. BANGARAPPA.—The time will have to be extended.

Sri D. B. KALMANKAR.—Compared to the Ministers' Salaries and Allowances (Amendment) Bill, this is a very important Bill and when we have taken two days for that, why should not this Bill be given two or three days ?

Sri D. DEVARAJ URS.—It is stated in the statement of objects and reasons :

> "The maximum amount of betterment contribution payable in respect of any land under the Mysore Irrigation (Levy of Betterment Contribution and Water Rate) Act, 1957 has been fixed at three hundred rupees per acre. It is considered necessary to enhance the maximum limit to five hundred rupees".

ಕೆಲವರ ಮನಸ್ಸಿನಲ್ಲಿ ಒಂದು ಅನುಮಾನ ಇದೆ. ಪ್ರಾಜೆಕ್ಟ್ ಎಂದರೆ 10 ಕೋಟಿಗೂ ಇರಬಹುದು, 2 ಲಕ್ಷಕ್ಕೂ ಇರಬಹುದು. ಕಾಂಟ್ರಿಬ್ಯೂಷನ್ 300 ರೂಪಾಯಿನಿಂದ 500 ರವರೆಗೆ ಹೆಚ್ಚಿಸಿರುವುದು 10 ಲಕ್ಷ ಕಟ್ಟುವ ಪ್ರಾಜೆಕ್ಟಿಗೆ ಮಾತ್ರ ಅನ್ವಯಿಸುತ್ತದೆ. ಹಿಂದೆ 300 ರೂಪಾಯಿ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳಬೇಕು ಎಂದು ಇತ್ತು. ಆವತ್ತಿನ ಕಾಲ ಹೇಗೆ ಇತ್ತು ಎಂದರೆ ಒಂದು ಪಲ್ಲ ಭತ್ತಕ್ಕೆ 5 ರೂಪಾಯಿ, ಒಂದು ಪಲ್ಲ ರಾಗಿಗೆ 4 ರೂಪಾಯಿ ಮಾರುವಂಥ ಕಾಲ. ನಮ್ಮ ಹುಣಸೂರಿನಲ್ಲಿ ಬೆಳೆವಂಥ ಭತ್ತವನ್ನು ಮಂಡ್ಯದ ಸಂತೆಗೆ ತೆಗೆದುಕೊಂಡು ಹೋಗುತ್ತಿದ್ದರು. ಈ ಅನುಭವ ಶ್ರೀಮಾನ್ ಚೆನ್ನಬಸಪ್ಪನವರಿಗೂ ಗೊತ್ತಿದೆ. ಅಲ್ಲೂ ಮಾರಾಟವಾಗದೆ ಮನೆಗೆ ತೆಗೆದುಕೊಂಡು ಹೋಗುವಂಥ ಕಾಲದಲ್ಲಿ ಕಾಂಟ್ರಿಬ್ಯೂಷನ್ ಎಕರೆಗೆ 300 ರೂಪಾಯಿ ಇತ್ತು.

4-30 P.M.

ಎರಡು ತಿಂಗಳ ಹಿಂದೆ ಒಂದು ಕ್ವಿಂಟಾಲ್ ಬತ್ತಕ್ಕೆ 90–95 ರೂಪಾಯಿ ಇತ್ತು. ಇವತ್ತಿನ ದಿವಸ 120 ರೂಪಾಯಿಗೆ ಹೋಗಿದೆ. ಒಂದು ಎಕರೆಗೆ ಮೂವತ್ತು ವರ್ಷಗಳ ಹಿಂದೆ 8–10 ಪಲ್ಲ ಬತ್ತ ಆಗುತ್ತಿತ್ತು, ಈಗ 15–20 ಪಲ್ಲ ಬೆಳೆಸುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದ ಹಿಂದೆ ಇದ್ದಂತಹ ಬೆಲೆಗೂ ಇವತ್ತಿನ ದಿವಸ ಮಾರುಕಟ್ಟೆಯಲ್ಲಿರತಕ್ಕಂತಹ ಬೆಲೆಗೂ ಅಜಗಜಾಂತರ ವ್ಯತ್ಯಾಸ ಇದೆ. ಹಿಂದೆ 10 ಕೋಟಿ ರೂಪಾಯಿಗೆ ಆದ ಪ್ರೊಜೆಕ್ಟ್ ಇವತ್ತು 300 ಕೋಟಿಯಾಗ

ಬಹುದು. ಕೆ.ಆರ್. ಸಾಗರವು ಅದೇ ರೀತಿಯಾಗಬಹುದು. ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಕೊಡಬೇಕಾಗಿರುವ ರೈತರಿಂದ ಒಂದು ಭಾಗವಾದರೂ ಬಂದರೆ, ಯಾವ ರೈತರಿಗೆ ಇದರಿಂದ ಅನುಕೂಲವಾಗುತ್ತದೋ, ಅವರಿಗೆ ಇನ್ನೂ ಪ್ರಯೋಜನವಾಗುತ್ತದೆ. ಇದರಿಂದ ಅವರ ಹಣ ಸಂಪಾದನೆ ಒಂದರಿಂದ 10 ಪಟ್ಟು ಜಾಸ್ತಿಯಾಗುತ್ತದೆ. ಇನ್ನು ಶೇಕಡಾ 80 ಜನ ಏನಿದ್ದಾರೆ, ಅವರಿಗೆ ಮಳೆ ಬಂದರೆ ಉಂಟು, ಇಲ್ಲದಿದ್ದರೆ ಇಲ್ಲ. ಅಂಥ ರೈತರಿಂದ ಒಂದು ಭಾಗ ಕೊಡಿ ಎಂದು ಕೇಳಿಲ್ಲ. ಇಲ್ಲಿ ಒಂದು ಕತೆ ನೆನಪಾಗುತ್ತದೆ. ಒಬ್ಬರು ಒಂದು ಮೂಟೆ ಉಪ್ಪು ಮತ್ತು ಒಂದು ಮೂಟೆ ತೆಂಗಿನಕಾಯಿ ಕಟ್ಟಿಕೊಂಡು ಹೋಗುತ್ತಿದ್ದರಂತೆ, ಮಧ್ಯೆ ದಾರಿಯಲ್ಲಿ ನೀರು ಸಿಕ್ಕಿಬಿಟ್ಟು, ದಾಟಿ ಬರುವಾಗ ಉಪ್ಪೆಲ್ಲಾ ಕರಗಿ ಹೋಯಿತು. ತೆಂಗಿನಕಾಯಿ ಮೂಟೆಯೂ ಹೋಯಿತು ಎಂದು ಬೊಬ್ಬೆ ಹೊಡೆಯಲು ಪ್ರಾರಂಭ ಮಾಡಿದನು. ಏಕೆಂದರೆ, ಉಪ್ಪು ಕರಗಿ ಹೋದುದರಿಂದ ಅದಕ್ಕೆ ಸುಂಕ ಕೊಡುವುದು ತಪ್ಪುತ್ತದೆ, ಅದೇ ರೀತಿ ತೆಂಗಿನಕಾಯಿಗೆ ಕೂಡ ತಪ್ಪಲಿ ಎಂದು ಆ ರೀತಿ ಬಡಕೊಂಡ.

ಶ್ರೀ ಅಜೀಜ್ ಸೇಠ್ (ನರಸಿಂಹರಾಜ).—ಇವತ್ತು ಪ್ರತಿಯೊಂದಕ್ಕೂ ನೀವು ಲೆವಿ ತೆಗೆದು ಕೊಳ್ಳುತ್ತಿದ್ದೀರಿ. ಫ್ಯಾಮಿಲಿ ಪ್ಲಾನಿಂಗಿಗೂ ಲೆವಿ ತೆಗೆದುಕೊಂಡಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಈ ಕಾರಣದಿಂದ ಕೊಡಬೇಕೆಂದು ಕೇಳಿದರೆ ಹೆಚ್ಚೇನೂ ಅಲ್ಲ. ನನ್ನ ಸ್ವಂತ ಅಭಿಪ್ರಾಯ ಹೇಳುವುದಾದರೆ, ಇನ್ನೂ ಸ್ವಲ್ಪ ಜಾಸ್ತಿ ಮಾಡಬಹುದೆಂದು ಹೇಳುತ್ತೇನೆ. ರಾಯಚೂರು, ಗುಲ್ಬರ್ಗಾದ ಕೆಲವು ಪ್ರದೇಶಗಳು ಮತ್ತು ಮೈದಾನ ಪ್ರದೇಶ ಏನಿದ್ದಾವೆ, ಅವರ ಖುಷ್ಕಿ ಜಮೀನಿಗೆ ಎಷ್ಟು ಬೆಲೆ ಸಿಗುತ್ತದೆ? ಬೆಳಗಾಂನಲ್ಲಿ ಸ್ವಲ್ಪ ಬೆಲೆ ಜಾಸ್ತಿ ಇದೆ. ಬಿಜಾಪುರಕ್ಕೆ ಹೋದರೆ 1000ರಕ್ಕೆ 50 ಎಕರೆ ಜಮೀನು ತೆಗೆದುಕೊಳ್ಳಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಇವರು ಸಾವಿರ ರೂಪಾಯಿಗೆ 50 ಎಕರೆ ಕೊಡುವುದಾದರೆ, ನಾನು ಈಗ ಸಾವಿರ ರೂಪಾಯಿ ಕೊಡುತ್ತೇನೆ, ಇವರು ಕೊಡಲಿ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಶ್ರೀ ದೇವರಾಜ ಅರಸರು ಬಹಳ ಇಳಿದು ಹೋಗಿದ್ದಾರೆ!

ಶ್ರೀ ಎಂ. ಜಿ. ಬಣಕಾರ್.—ಮಂತ್ರಿಯಾಗಿದ್ದು, ನಂತರ ಮನೆಗೆ ಹೋಗುವಾಗ ಹೇಗೆ ಇರುತ್ತಾರೋ, ಹಾಗೆ ಮಾನ್ಯ ಸದಸ್ಯರು ಇದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಮಂತ್ರಿಪದವಿ ಬಿಟ್ಟ ನಂತರ ಚೆನ್ನಾಗಿ ಆಗಿದ್ದೇನೆಂದು ಕೆಲವರು ನನ್ನ ಸ್ನೇಹಿತರು ಹೇಳುತ್ತಾರೆ.

ಶ್ರೀ ಎಂ. ಜಿ. ಬಣಕಾರ್.—ಅದನ್ನು ಆಚೆ ಕಡೆಗೆ ಹೇಳಿ.

ಶ್ರೀ ಡಿ. ದೇವರಾಜ ಅರಸ್.—ಯಾರು ರಾಜಕೀಯಕ್ಕೆ ಬಂದು ಮಂತ್ರಿಯಾಗದಿದ್ದರೆ ಮೋಕ್ಷವಿಲ್ಲವೆಂದು ತಿಳಿದುಕೊಂಡಿದ್ದಾರೋ, ಅವರಿಗೆ ಆ ರೀತಿಯಾಗುತ್ತದೆ. ನನಗೆ ಆ ರೀತಿ ಏನೂ ಇಲ್ಲ.

ಆದ್ದರಿಂದ ಇಲ್ಲಿ 500 ರೂಪಾಯಿಯೇ ಹಾಕಬೇಕೆಂದು ಏನೂ ಇಲ್ಲ. ಅದು ಮ್ಯಾಕ್ಸಿಮಂ, 300, 200, 150 ರೂಪಾಯಿ ವರೆಗೂ ಹಾಕಬಹುದು. ಒಂದು ಸಲ 500 ರೂಪಾಯಿ ಕೊಡಬೇಕಾದರೆ, ತೊಂದರೆಯಾಗಬಹುದು ಎಂದು ಹೇಳಬಹುದು. ಆದರೆ ಇದು ಸರಿಯಲ್ಲವೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಕೆಲವೇ ಜನ ಅನುಕೂಲ ಪಡೆಯುತಕ್ಕ ರೈತರ ಪರವಾಗಿ ವಾದವನ್ನು ಮಾಡುವುದು ಸರಿಯಲ್ಲ. ಇದರ ಬಗ್ಗೆ ಸಂಪೂರ್ಣ ಬೆಂಬಲವನ್ನು ಕೊಡಬೇಕು. ನನಗನಿಸುತ್ತದೆ, ಒಂದು ದೊಡ್ಡ ಅನ್ಯಾಯ ದೇಶಕ್ಕೆ ಆಗಿದೆ ಎಂದು. 1957ನೇ ಇಸವಿಯಲ್ಲಿ ಈ ಆಕ್ಟನ್ನು ಜಾರಿಗೆ ತಂದು ಇದುವರೆಗೂ ಮೂರು ಕಾಸು ಬೆಟ್ಟರ್‌ಮೆಂಟ್ ಲೆವಿ ವಸೂಲು ಮಾಡಿಲ್ಲ. ಏಕೆ ವಸೂಲು ಮಾಡಿಲ್ಲ? ಈ ರೀತಿಯವಾದ ವಿವಾದಗಳಲ್ಲಿ ಸುಮಾರು 10 ವರ್ಷ ಕಳೆದುಹೋಯ್ತು. ಒಂದು ಸಾರಿ ಒಂದು ಸಾವಿರ, ಒಂದು ಸಾರಿ 500 ರೂಪಾಯಿ ಎಂದು ಹೇಳುತ್ತಿದ್ದರು. ಒಂದು ಕಡೆ ಪ್ಲಾನಿಂಗ್‌ಗೆ ದುಡ್ಡು ಬೇಕು, ಕಂಟ್ರಿಬ್ಯೂಶನ್ ಕೋಟ್ಯಾಂತರ ರೂಪಾಯಿ ಬರಬೇಕಾಗಿತ್ತು, ಬಂದಿಲ್ಲ. ಸರ್ಕಾರದವರು ಈಗಲಾದರೂ ಈ ಮಸೂದೆ ಪಾಸಾದ ಕೂಡಲೇ ದೇಶಾದ್ಯಂತ ಕಂಟ್ರಿಬ್ಯೂಶನ್ ಎಲ್ಲೆಲ್ಲಿ ವಸೂಲು ಮಾಡಬೇಕೋ, ಅದನ್ನು ಕಂತಿನಲ್ಲಿ ಆದರೂ ವಸೂಲು ಮಾಡಬೇಕು. ಆದ್ದರಿಂದ ಬಹಳ ಮಟ್ಟಿಗೆ ನಾವು 4ನೇ ಪಂಚವಾರ್ಷಿಕ ಯೋಜನೆಗೆ ಏನು ಅಂದಾಜು ಹಾಕುತ್ತಿದ್ದೇವೆ, ಅದಕ್ಕೆ ಬಹಳ ಮಟ್ಟಿಗೆ ಸಹಾಯವಾದೀತು ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇಷ್ಟು ಹೇಳಿ ಇದಕ್ಕೆ ನನ್ನ ಬೆಂಬಲವನ್ನು ಕೊಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಪಟ್ಟಣ).—ಸ್ವಾಮಿ, ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಬೇಕೆಂಬ ಇಚ್ಛೆ ನನಗೆ ತಂಬಾ ಬಂದು ಈಗ ಮಾತನಾಡಲಿಕ್ಕೆ ಬಂದಿದ್ದೇನೆ. ಈ ಒಂದು ತಿದ್ದುಪಡಿ ಮಸೂದೆಯಲ್ಲದೆ, ಇನ್ನೊಂದು ತಿದ್ದುಪಡಿ ಮಸೂದೆ ನಾಳೆ ಅಥವಾ ಆಚೆ ನಾಡಿದ್ದು ಬರತಕ್ಕದ್ದಿದೆ. ಅದು, ಇದು ಎರಡೂ ಸೇರಿ ಪ್ರಸ್ತಾಪ ಮಾಡಿದ್ದರೆ ಚೆನ್ನಾಗಿತ್ತು. ಇದನ್ನು ಬೇರೆ ಅದನ್ನು ಬೇರೆ ಮಾಡಿದುದರಿಂದ ಸರಿಯಾದ ರೀತಿಯಲ್ಲಿ ವಾದ ವಿವಾದಗಳನ್ನು ವ್ಯಕ್ತಪಡಿಸುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಜನರು ತಾವು ಅಭಿವೃದ್ಧಿ ಹೊಂದುತ್ತಾ ಇರುವ ಕಾಲದಲ್ಲಿ ಅದಕ್ಕೆ ತಕ್ಕಂತೆ ದೇಶದ ಅಭಿವೃದ್ಧಿಗೆ ಸಾಕಷ್ಟು ಹಣವನ್ನು ಕೊಡಬೇಕೆಂಬ ಮೂಲ ತತ್ವ ಏನು ಇದೆಯೋ ಅದು ಒಳ್ಳೆಯದು. ಅದು ಎಲ್ಲರಿಗೂ ಅನ್ವಯವಾಗತಕ್ಕದ್ದು. ಈ ಬೆಟರ್‌ಮೆಂಟ್ ಲೆವಿ ಎನ್ನುವ ತತ್ವ ಅನೂಚಾನವಾಗಿ ಬಹಳ ಕಾಲದಿಂದ ಬಂದಿರತಕ್ಕದ್ದು. ಅದರಲ್ಲ ನ್ಯಾಯ, ನೀತಿ ಏನಿದೆ ಎನ್ನುವುದು ಸೂಕ್ಷ್ಮವಾಗಿ ಇದುವರೆಗೆ ರೈತಾಪಿಜನಗಳು ಹೆಚ್ಚು ಗಮನಕೊಟ್ಟಿಲ್ಲ. ಕಾರಣ ಅವರಲ್ಲಿ ತಿಳುವಳಿಕೆ ಕಡಿಮೆಯಾಗಿರುವುದರಿಂದ ಅವರಿಗೋಸ್ಕರವಾಗಿ ಪ್ರತಿಪಾದನೆಮಾಡುವ ಜನ ಬೇರೆ ವರ್ಗದವರಾಗಿರುವುದರಿಂದ, ಅವರಿಗೆ ರಕ್ಷಣೆ ಸಾಕಷ್ಟು ಸಿಗಲಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬೇಕು. ರೈತಾಪಿ ವರ್ಗದವರೆಲ್ಲರೂ ಈ ಕಂಟ್ರಿಬ್ಯೂಷನ್ ಕೊಡುವ ಹಾಗೆ ಇಲ್ಲ. ಕೇವಲ ಪ್ರತಿಫಲ ಪಡೆಯುವವರು ಮಾತ್ರ ಅದನ್ನು ಕೊಡತಕ್ಕದ್ದು ಎಂಬುದಾಗಿ ಮಾನ್ಯ ಅರಸ್ ಅವರು ಹೇಳಿದರು, ನಿಜ. ಪ್ರಾಜೆಕ್ಟ್ ಕಟ್ಟುವಂಥ ಒಂದು ಕಾರಣದಿಂದಲೇ ಬೆಲೆ ಹೆಚ್ಚಿದೆಯೆಂಬುದಾಗಿ ಹೇಳಿದರೆ ಅದು ಸರಿಯಲ್ಲ, ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿರುವಹಾಗೆ ಪದಾರ್ಥಗಳ ಬೆಲೆಯೂ ಗಗನಕ್ಕೇರಿದೆ. ಇದೂ ಒಂದು ಕಾರಣ. ಬಹುಶಃ ಬೆಂಗಳೂರಿನಿಂದ ನಾಲ್ಕಾರು ಮೈಲಿಗಳ ದೂರ ಹೋಗಿ ನೋಡುವುದಾದರೆ, ಬೆಲೆ ಒಂದು ಎಕರೆಗೆ 10-14-15 ಸಾವಿರ ರೂಪಾಯಿಗಳು ಇವೆ. ಅಲ್ಲಿ ಯಾವ ನೀರಾವರಿ ಪ್ರಾಜೆಕ್ಟನ್ನು ಕಟ್ಟಿದ್ದಾರೆ? ಯಾವುದನ್ನೂ ಕಟ್ಟಿಲ್ಲ. ಆದುದರಿಂದ ಭೂಮಿ ಬೆಲೆ ಹೆಚ್ಚಾಗುವುದಕ್ಕೆ ಹಲವಾರು ಕಾರಣಗಳಿವೆ. ಅವರಿಂದ ನಾವು ಏನಾದರೂ ಬೆಟರ್‌ಮೆಂಟ್ ಲೆವಿಯನ್ನು ವಸೂಲು ಮಾಡಿದ್ದೇವೆಯೋ? ಮತ್ತೆ ಸರ್ಕಾರದ ಅನೇಕ ಆಜ್ಞೆಗಳು ಹೊರಟಿರುವ ಪರಿಣಾಮವಾಗಿ ಪದಾರ್ಥಗಳ ಹಾಗೂ ಆಸ್ತಿಪಾಸ್ತಿಗಳ ಬೆಲೆ ಏರುಪೇರುಗಳಾಗುತ್ತಿವೆ. ಒಂದೊಂದು ರೀತಿಯಿಂದ ಕೆಲವು ತರಹ ಆಸ್ತಿಗಳ ಬೆಲೆ ಗಗನ ಮುಟ್ಟಿವೆ. ಒಂದು ಸಲ ಆಜ್ಞೆಯನ್ನುಮಾಡಿ, ಅದರಿಂದ ಯಾರಾದರೂ ಅನುಕೂಲ ಹೊಂದಿದ ಮೇಲೆ ಆ ಆಜ್ಞೆಗಳನ್ನು ತಲೆಕೆಳಗಾಗಿ ಮಾಡಿ ಇನ್ನೊಂದು ರೀತಿಯಲ್ಲಿ ಆಜ್ಞೆಗಳನ್ನು ಮಾಡಿರುತ್ತಾರೆ. ಯಾರ್ಯಾರು ಈ ಆಜ್ಞೆಯನ್ನು ಅನುಸರಿಸಿ ಬೆಲೆಗಳನ್ನು ಹೆಚ್ಚುಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆಮಾಡುವಂಥ ವೆಸ್ಟೆಡ್ ಇಂಟರೆಸ್ಟ್ ಇರತಕ್ಕವರು ಏನಿದ್ದಾರೆ ಅವರ ಒಂದು ಉಪಯೋಗಕ್ಕಾಗಿ ಇದನ್ನು ಮಾಡುತ್ತಿದ್ದಾರೋ ಏನೋ ಎಂದು ನನಗನ್ನಿಸುತ್ತಿದೆ. ನಾವು ಮಾಡುವಂಥ ಇಂತಹ ಆಜ್ಞೆಗಳಿಂದಲೇ ಈ ರೀತಿ ಬೆಲೆ ಹೆಚ್ಚಿದೆ ಎಂಬುದನ್ನು ಸರ್ಕಾರದವರು ಮನಗಾಣಬೇಕು. ಇದರಲ್ಲಿ ನಿಮಗೆ ಎಷ್ಟು ಹಣ ಬಂತು? ಇವತ್ತಿವರೆಗೂ ಅದರ ಬಗ್ಗೆ ನೀವು ಯಾವ ಶಾಸನವನ್ನೂ ಮಾಡಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಈ ಸಮಸ್ಯೆಯನ್ನು ಪರಿಶೀಲನೆ ಮಾಡುವುದೇ ವಿನಹ ಮತ್ತೆ ಬೇರೆ ಏನೂ ಇಲ್ಲ. ನಾನು ಒಂದು ಪ್ರಶ್ನೆಯನ್ನು ಹಾಕುತ್ತೇನೆ. ಒಂದು ಜಲಾಶಯವನ್ನು ಕಟ್ಟುವುದು ರಾಷ್ಟ್ರದ ಕೆಲಸ, ಅದು ರಾಷ್ಟ್ರದ ಸ್ವತ್ತು. ಕೆರೆಯ ಕೆಳಗೆ ಅಥವಾ ಜಲಾಶಯದ ಕೆಳಗೆ ಇರತಕ್ಕ ಜಮೀನ್ದಾರರು ಏನು ಇದ್ದಾರೆ ಅವರ ಒಂದು ಉಪಯೋಗಕ್ಕಾಗಿ ಮಾತ್ರ ಅದನ್ನು ಕಟ್ಟುತ್ತೇವೆಂದು ಸರ್ಕಾರದವರು ತಿಳಿದಿದ್ದರೆ ಅದು ಮಹತ್ವವಾದಂಥ ತಪ್ಪು. ಇಡೀ ರಾಷ್ಟ್ರದ ಬೆಳವಣಿಗೆಗೋಸ್ಕರವೇ ಹೊರತು ಅದು ಕೇವಲ ಜಮೀನ್ದಾರರ ಉಪಯೋಗಕ್ಕೆ ಅಲ್ಲವೆಂಬುದನ್ನು ಸರ್ಕಾರದವರು ತಿಳಿಯಬೇಕು. ಅದಕ್ಕಾಗಿ ಮತ್ತೆ ಕಂಟ್ರಿಬ್ಯೂಷನ್ ತೆಗೆದುಕೊಳ್ಳುವುದು ಮತ್ತು ನಾವು ಅದಕ್ಕೇನು ಖರ್ಚುಮಾಡುತ್ತೇವೋ ಅದರಲ್ಲಿ ಒಂದು ಭಾಗ ಸರ್ಕಾರಕ್ಕೆ ಬರಬೇಕೆಂದು ಹೇಳುವುದು ಸರಿಯಲ್ಲ. ಒಂದು ಕೋಟಿ ರೂಪಾಯಿಗಳಾಗಲೀ, 10 ಕೋಟಿ ರೂಪಾಯಿಗಳಾಗಲೀ, ಅಥವಾ 100 ಕೋಟಿ ರೂಪಾಯಿಗಳು ಖರ್ಚಾಗಲೀ ಇಡೀ ರಾಷ್ಟ್ರದ ಜನಜೀವನವನ್ನು ಸಾಧಿಸುವುದಕ್ಕೆ ಇಂತಹ ಜಲಾಶಯಗಳು ಆಗಲೇ ಬೇಕು. ಅದಕ್ಕೆ ಅವನು ಕೊಡತಕ್ಕದ್ದು ಅಲ್ಪಸ್ವಲ್ಪ ಹಣ, ಜುಜುಬಿ. ಕನ್ನಂಬಾಡಿ ಕಟ್ಟೆ ಅಪ್ಪರ್ ಕೃಷ್ಣಾ ಅಣೆಕಟ್ಟಿಗೆ ಅವರು ಕೊಡುವುದು 6 ಕೋಟಿ ರೂಪಾಯಿಗಳು. ಅದಕ್ಕೆ ಖರ್ಚು ಆಗುವುದು 200-300 ಕೋಟಿ ರೂಪಾಯಿಗಳು. ಆದ್ದರಿಂದ ಆ ತತ್ವ ಸರಿಯಲ್ಲ. ಪಾಶ್ಚಿಮಾತ ದೇಶದಲ್ಲಿ ದೊಡ್ಡದೊಡ್ಡ ಜಲಾಶಯಗಳನ್ನು ನಿರ್ಮಾಣಮಾಡುವುದು ಸರ್ಕಾರವೇ. ಆದರೆ ಅದೊಂದೇ ನಿರ್ಮಾಣಮಾಡುವುದು ಅಲ್ಲ. ಅನೇಕ ದೊಡ್ಡದೊಡ್ಡ ಜಲಾಶಯಗಳನ್ನು ನಿರ್ಮಾಣಮಾಡುವುದನ್ನು ಅನೇಕ ದೊಡ್ಡದೊಡ್ಡ ಪ್ರೈವೇಟ್ ಕಾರ್ಪೊರೇಷನ್ನುಗಳೂ ಕೈಗೊಳ್ಳುತ್ತವೆ. ಅವು ನೀರನ್ನು ಒದಗಿಸುವುದಲ್ಲದೆ ಅದನ್ನು ಬೇರೆಯವರಿಗೆ ಮಾರಿ ಅದರಿಂದ ಲಾಭ ಪಡೆಯುತ್ತಿದ್ದಾರೆ. ಇಲ್ಲಿ ಹಣವಿಲ್ಲವೆಂದು ಹೇಳುತ್ತೇವೆ. ಕಾರಣ, ನಾವು ಅದನ್ನು ಬಿಜಿನೆಸ್ ರೀತಿಯಲ್ಲಿ ಇವತ್ತಿನವರೆಗೂ ಡೆವಲಪ್ ಮಾಡಿಲ್ಲ. ನಮ್ಮ

ನೀರನ್ನು ಎಷ್ಟು ನಿಲ್ಲಿಸುತ್ತೇವೆ, ನೀರನ್ನು ಮಾರಾಟಮಾಡುವುದಕ್ಕೆ ಎಷ್ಟು ಹಣ ಕೊಡಬೇಕು, ಅದರಿಂದ ಪ್ರತಿವರ್ಷ ಎಷ್ಟು ಉತ್ಪತ್ತಿಮಾಡುತ್ತೇವೆ—ಇವೆಲ್ಲವನ್ನೂ ಲಗತ್ತಿಸಿ ಯೋಚನೆ ಮಾಡುವುದು ಒಂದು ನ್ಯಾಯ. ಇದಕ್ಕೆ ಸಂಬಂಧಪಟ್ಟಂತೆ ಈಗ ನೀವು ಮುಂಗಡವಾಗಿ ಹಣ ತೆಗೆದುಕೊಳುತ್ತೇವೆಂದು ಹೇಳುತ್ತಿದ್ದೀರಿ. ಆದ್ದರಿಂದ ಅದನ್ನು ಇದನ್ನು ಲಗತ್ತಿಸಿ ಮಾತನಾಡು ವುದಕ್ಕೆ ಪ್ರಯತ್ನಮಾಡಬೇಕು. ಈಗ ಒಂದು ಜಲಾಶಯವನ್ನು ನಿರ್ಮಾಣಮಾಡುತ್ತೇವೆ, ಮುಂದೆ ನಿಮ್ಮ ಜಮೀನಿಗೆ ಒಳ್ಳೆಯ ಬೆಳೆ ಬರುತ್ತದೆ, ಅದಕ್ಕೋಸ್ಕರ ಹಣ ಕೊಡಿ ಎಂಬುದಾಗಿ ಕೇಳುವುದು ಯಾವ ಅರ್ಥಶಾಸ್ತ್ರಕ್ಕೂ ಅನುಗುಣವಾಗಿಲ್ಲ, ಈ ಜಲಾಶಯ ಆಗುತ್ತದೋ ಇಲ್ಲವೋ ಎಂಬ ಅನುಮಾನ ಅವರಿಗೆ ಬರುತ್ತದೆ, 9 ವರ್ಷಗಳ ಹಿಂದೆಯೇ ಕೆಲವು ಜಲಾಶಯಗಳನ್ನು ಪ್ರಾರಂಭ ಮಾಡಲಿಕ್ಕೆ ಪ್ರಯತ್ನ ಪಟ್ಟರು. ನಮ್ಮ ಕಣ್ಣಮುಂದೆ ಇರತಕ್ಕ ಕಂಬದಕಡ, ಹಾರಂಗಿ, ಕೃಷ್ಣಾ ಪ್ರಾಜೆಕ್ಟ್‌ಗಳು ಎಲ್ಲಿ ಹೋದುವು? ಮುಂಗಡವಾಗಿ ಹಣ ಕೊಡಿ, ಮುಂದೆ ಅವನ್ನು ಕಟ್ಟುತ್ತೇವೆಂದು ಹೇಳುವುದು, ಎಷ್ಟು ಆಭಾಸದ ಮಾತು? ಅದು ಎಷ್ಟು ಅನ್ಯಾಯವಾಗುತ್ತದೆ! ರೈತಾಪಿ ಜನಗಳಾದ ವರಿಗೆ ಈಗಲೇ ಅವನ್ನು ಮಾಡೋಣ, ಹಣ ಕೊಡಿ ಎಂದು ಹೇಳಿದರೆ, ಸಾಲಸೋಲ ಮಾಡಿ ಕೊಡು ತ್ತಾರೆ. ಇದು ಮೂಲತತ್ವದ ವಿಷಯ. ಇವತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ 200—300 ಕೋಟಿ ರೂಪಾಯಿಗಳು ಬೇಕಾಗಿದೆ. ಅದಕ್ಕಾಗಿ ಹೆಚ್ಚು ಹಣ ಬೇಕು. ನಾವು ಮಾಡುತ್ತೇವೆ, ಹಣಕೊಡಿ ಎಂದು ಕೇಳಿದರೆ, ಜನರು ಪೆಪ್ಪರ್‌ಮೆಂಟ್ ಕೈಲಿ ಹಿಡಿದುಕೊಂಡು ಎಲ್ಲಿಗಾದರೂ ಹೋದರೆ ಅದನ್ನು ನೋಡಿ ಮಕ್ಕಳು ಬರುವ ಹಾಗೆ, ಪ್ರಾಜೆಕ್ಟ್ ಮಾಡಲು ಸರ್ಕಾರದವರು ಹಣ ಕೇಳುತ್ತಾರೆ, ಅದರಿಂದ ನಮ್ಮ ಮಕ್ಕಳು, ಮೊಮ್ಮಕ್ಕಳಿಗೆ ಮುಂದೆ ಅನುಕೂಲವಾಗಲಿ ಎಂಬುದಾಗಿ ಸಾಲಸೋಲ ಮಾಡಿ ಹಣವನ್ನು ರೈತಾಪಿ ಜನಗಳು ಕೊಡುತ್ತಾರೆ. ಇವತ್ತು ಅಷ್ಟು ಹಣವನ್ನು ಖರ್ಚುಮಾಡಿ, ಸುಮಾರು 200 ಕೋಟಿ ರೂಪಾಯಿಗಳಷ್ಟು ಒಂದು ಪ್ರಾಜೆಕ್ಟಿಗೆ ಖರ್ಚುಮಾಡಿದಮೇಲೆ, ನಾಳೆ ನೀರು ಇಲ್ಲದೇ ಹೋದರೆ, ಹಣ ಕೊಟ್ಟವರ ಗತಿಯೇನು? ನಾನು ಉದಾಹರಣೆಗೆ ಹೇಳುವುದಾದರೆ, ಹಾರಂಗಿ ಜಲಾಶಯವನ್ನು ಮಾಡಬೇಕೆಂದು ಏರ್ಪಾಡು ಮಾಡಿದರು. ಆ ಜಲಾಶಯಕ್ಕೆ ತಳಹದಿಯನ್ನು ಹಾಕ ಬೇಕೆಂದು ಲಾಲ್ ಬಹದೂರ್ ಶಾಸ್ತ್ರಿಯವರನ್ನು ಆಶ್ರಯ ಮಾಡಿದ್ದರು. ಮುಂಗಡವಾಗಿ ಹಣ ವನ್ನು ವಸೂಲುಮಾಡಿದ್ದರೆ ಅಲ್ಲಿನ ಜನರ ಗತಿಯೇನು? ಪುಟ್ಟ ಪುಟ್ಟ ಪ್ರಾಜೆಕ್ಟ್‌ಗಳು ಅವು ಟೆಕ್ನಿಕಲಿ ಅನ್‌ಫೀಜಿಬಲ್ ಎಂಬುದಾಗಿ ಹೇಳುತ್ತಾರೆ. ಆದ್ದರಿಂದ ಅದು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಇದನ್ನು ನಾನು ಹೇಳುವ ಮಾತಲ್ಲ. ಪ್ರಸಿದ್ಧ ಇಂಜನಿಯರ್ ಆಗಿರತಕ್ಕ ಮಾನ್ಯ ಶ್ರೀ ಕೆ. ಎಲ್. ರಾವ್ ಅವರು ಹೇಳಿದ್ದಾರೆ. ಇದು ತಪ್ಪಲ್ಲ. ಇದಕ್ಕಾಗಿ ಮುಂಗಡ ಹಣವನ್ನು ಕೊಟ್ಟಿದ್ದರೆ, ಅವರ ಗತಿಯೇನು? ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಕೃಷ್ಣಾದಲ್ಲಿ ಬೇಕಾದಷ್ಟು ನೀರು ಇದೆ, ನಾರಾಯಣಪುರ ಕಟ್ಟುತ್ತೇವೆಂದು ಹಣ ತೆಗೆದುಕೊಳ್ಳುವುದಕ್ಕೆ ಹೋಗುತ್ತೇವೆ, ಅಂದರೆ, ಜನ ಆತುರದಿಂದ ಹಣ ಒಂದುವೇಳೆ ಕೊಟ್ಟಾರು, ಕೊನೆಗೆ ಮಾಂಗಲ್ಯವನ್ನು ಮಾರಿಯಾದರೂ ಹಣ ಕೊಡುತ್ತಾರೆ. ನಾವು ಉಣಲಿಲ್ಲ, ನಮ್ಮ ಮಕ್ಕಳಾದರೂ ಊಟಮಾಡಲಿ ಎಂದಾದರೂ ಹೇಳಿ ಹಣವನ್ನು ಕೊಡುತ್ತಾರೆ. ನಾನು ಇದನ್ನು ಜವಾಬ್ದಾರಿಯಿಂದ ಹೇಳುತ್ತೇನೆ ಕೃಷ್ಣಾನದಿಯಲ್ಲಿ ನಿಮಗೆ ಬೇಕಾದಷ್ಟು ನೀರು ಸಿಗುವುದಿಲ್ಲವೆಂದು. ಅಷ್ಟೇ ಅಲ್ಲ. ಅಂಕಿ ಅಂಶಗಳ ಆಧಾರಗಳನ್ನೂ ಸಹ ಕೊಟ್ಟಿದ್ದೇನೆ. ನಾವು ಕುಡಿಯುವುದಕ್ಕೆ ಮತ್ತು ಕೈಗಾರಿಕೆಗಳಿಗಾಗಿ ನೀರು ಇಟ್ಟುಕೊಂಡರೂ ಕೇವಲ 50 ಲಕ್ಷ ಘನ ಅಡಿಗಳಷ್ಟು ಮೇಲೆ ನಮಗೆ ನೀರು ಅದರಿಂದ ಸಿಗುವುದಿಲ್ಲ. ಅವು ಮುಂದೆ ಬರುತ್ತವೆ ಎಂದು ಹೇಳಿ ಇವೊತ್ತಿನ ದಿವಸ ಆ ಎರಡು ಯೋಜನೆಗಳಿಗೂ ಆಗಬೇಕಾದಂತಹ ಹಣವನ್ನು ಮುಂಗಡವಾಗಿ ರೈತರಿಂದ ವಸೂಲು ಮಾಡಿ ನಾಳೆ ಕೃಷ್ಣಾ ಜಲಾಶಯ ನಿರ್ಮಾಣವಾದರೂ ಅದು ನೀರಿಲ್ಲದೆ ಬತ್ತಿಹೋದರೆ ಮುಂದಿದ ಜನಾಂಗದ ಭವಿಷ್ಯ ಏನು? ಅದಕ್ಕೆ ಮುಂಗಡವಾಗಿ ದುಡ್ಡು ಕೊಟ್ಟಿರುವವರ ಗತಿ ಏನು? 1957 ನೇ ಇಸವಿಯಲ್ಲಿ ಒಂದು ಎಕರೆಗೆ 300 ರೂಪಾಯಿಗಳ ಕಾಂಟ್ರಿಬ್ಯೂಷನ್ ಹಾಕಿದ್ದಾರೆ. ಈಗ 57 ಕಳೆದು ಹೋಯಿತು, 67 ನೇ ಇಸವಿ ಬಂದಿದೆ. ಈಗ ಮತ್ತೆ ಒಂದು ಎಕರೆಗೆ 500 ರೂಪಾಯಿಗಳ ಕಾಂಟ್ರಿ ಬ್ಯೂಷನ್ ಹಾಕುವುದು ನ್ಯಾಯ ಎಂದು ಹೇಗೆ ಕಂಡುಬಂತು, ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಲಿಲ್ಲ. ನ್ಯಾಯವಾಗಿರುವುದಕ್ಕೆ ಒಪ್ಪಿಗೆ ಕೊಡಬೇಕಾದ್ದು ಧರ್ಮ ಸರ್ಕಾರ ಮಾಡಿದ್ದನ್ನೆಲ್ಲಾ ಸರಿಯಲ್ಲ ಎಂದು ಹೇಳುವುದು ನ್ಯಾಯವಲ್ಲ. ಒಳ್ಳೆಯ ಕೆಲಸವನ್ನು ಮಾಡಿದರೆ ಭೇಷ್ ಎಂದು ಹೇಳೋಣ ಕೆಟ್ಟ ಕೆಲಸವನ್ನು ಮಾಡಿದರೆ ಅದು ಸರಿಯಲ್ಲ ಎಂದು ನಾವು ಹೇಳಬೇಕಾಗುತ್ತದೆ. ಈಗ ತುಂಗಭದ್ರಾ ಜಲಾಶಯದಲ್ಲಿ ಏಕದಂ ಎಕರೆಗೆ 300 ರೂಪಾಯಿಗಳ ಕಾಂಟ್ರಿಬ್ಯೂಷನ್ ಇರುವುದನ್ನು 500 ರೂಪಾಯಿಗಳನ್ನು ಮಾಡಿದರೆ ಹೇಗೆ? ಯಾವ ಆಧಾರದ ಮೇಲೆ ಅಷ್ಟು ಕಾಂಟ್ರಿಬ್ಯೂಷನ್ ಹಾಕುತ್ತೀರಿ? ಒಂದಕ್ಕೆ 10 ರಷ್ಟು ಯಾವ ಜಲಾಶಯದ ಕೆಳಗಡೆ ಇರತಕ್ಕ ಜಮೀನಿನ ಬೆಲೆ ಏರಿದೆ? ಈಗ ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಇವೆ. ಒಳ್ಳೆಯ

(ಶ್ರೀ ಎಚ್. ಎಂ. ಚನ್ನಬಸಪ್ಪ)

ವ್ಯಾಪಾರಸ್ಥಳ ಇತ್ಯಾದಿ ಕಾರಣಗಳಿಂದ ಇಲ್ಲಿ ಹಿಂದೆ 400 ರೂಪಾಯಿಗಳ ಜಮೀನಿನ ಬೆಲೆ ಇದ್ದದ್ದು 4 ಸಾವಿರ ರೂಪಾಯಿಗಳಾಗುತ್ತದೆ. ಮಂಗಳೂರಿನಲ್ಲಿ ಬಂದರು ಮಾಡುತ್ತಾರೆ, ವೆಸ್ಟ್ ಕೋಸ್ಟ್ ರಸ್ತೆಗಳನ್ನು ಮಾಡುತ್ತಿದ್ದಾರೆ, ಸೇತುವೆಗಳನ್ನು ಮಾಡಿದ್ದಾರೆ, ಅಲ್ಲಲ್ಲೇ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಾರೆ. ಇದರಿಂದಾಗಿ ಅಲ್ಲಿ ಜಮೀನಿನ ಬೆಲೆ ಹೆಚ್ಚುತ್ತದೆ. ಅವರಿಗೆ ಬೇಕಾದರೆ ಬೆಟರ್‌ಮೆಂಟ್ ತೆರಿಗೆಯನ್ನು ಹಾಕಲಿ.

ಶ್ರೀ ಎ. ಪಿ. ಅಪ್ಪಣ್ಣ (ವಾಣಿಜ್ಯಶಾಖೆಯ ಉಪ ಮಂತ್ರಿಗಳು).—ದೊಡ್ಡ ದೊಡ್ಡ ಜಲಾಶಯ ನಿರ್ಮಾಣವಾಗಿರುವ ಕಡೆಗಳಲ್ಲಿರುವ ಜಮೀನಿನ ಬೆಲೆ ಇತರ ಕಡೆಗಳಲ್ಲಿರುವ ಜಮೀನಿನ ಬೆಲೆಗಿಂತ ಹೆಚ್ಚು ಇದೆ ಎಂಬುದನ್ನು ಒಪ್ಪುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೆಂಗಳೂರಿನ ಸುತ್ತಮುತ್ತ ಇರುವ ಒಂದು ಎಕರೆ ಜಮೀನು ನಮ್ಮ ಕಡೆ ಜಲಾಶಯದ ಕೆಳಗಡೆ ಇರತಕ್ಕ 10 ಎಕರೆಗೆ ಕೂಡ ಸರಿ ಆಗುವುದಿಲ್ಲ. ಇವೊತ್ತಿನದಿವಸ ಬೆಂಗಳೂರು ಮಂಗಳೂರಿನ ಸುತ್ತಮುತ್ತ ಇದ್ದಂತಹ ಜನಗಳು ಬಿಕಾರಿಗಳಾಗಿದ್ದವರು ಕುಬೇರರಾಗಿದ್ದಾರೆ. ನೀವು ಕಣ್ಣುಮುಚ್ಚಿ ಕುಳಿತುಕೊಂಡಿದ್ದೀರಾ ? ಆದ್ದರಿಂದ ಪ್ರಚೋದನೆ ಮಾಡಬೇಡಿ. ಈ ದೃಷ್ಟಿಯಿಂದ ನಾನು ಹೇಳತಕ್ಕಂಥಾದ್ದನು ಮಾನ್ಯ ಮಂತ್ರಿಗಳು ಕೂಲಂಕುಷವಾಗಿ ಪರಿಶೀಲನೆ ಮಾಡಲಿ. ನಾನು ಹೇಳುವಂತಹ ಮಾತಿನಲ್ಲಿ ಹೆಚ್ಚು ಕಡಿಮೆ ಇದ್ದರೆ ಅದಕ್ಕೆ ನಾನು ಜವಾಬ್ದಾರನಾಗುತ್ತೇನೆ. ಇವೊತ್ತು ಜಮೀನಿನ ಬೆಲೆ ಏರುವುದಕ್ಕೆ ಅನೇಕ ಕಾರಣಗಳು ಸೇರಿಕೊಂಡಿವೆ. ಸರ್ಕಾರದವರು ಕೈಗೊಂಡ ಕೈಗಾರಿಕೆಗಳು, ಬಂದರುಗಳು, ರಸ್ತೆಗಳು ಮುಂತಾದ ಅಭಿವೃದ್ಧಿ ಕಾರ್ಯಗಳಿಂದಾಗಿ ಬೆಂಗಳೂರು ಹಾಗೂ ಮಂಗಳೂರು ಸುತ್ತಮುತ್ತ ಇರತಕ್ಕ ಆಸ್ತಿಪಾಸ್ತಿಗಳ ಬೆಲೆ ಏರಿತು. ಇದರಿಂದಾಗಿ ಆ ಜಮೀನಿನ ಮಾಲೀಕರು ಹೇರಳವಾಗಿ ಹಣವನ್ನು ಸಂಪಾದನೆ ಮಾಡಿದ್ದಾರೆ. ಕಾಳ ಸಂತೆ ಕೋರರು ಬೇಕಾದಷ್ಟು ಜನ ಕೋಟಿ ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಿ ಸೌಧದಮೇಲೆ ಸೌಧವನ್ನು ಕಟ್ಟಿದ್ದಾರೆ. ಅವರಿಗೆ ಹಣ ಎಲ್ಲಿಂದ ಬಂತು ? ನಾನು 100—200 ರೂಪಾಯಿಗಳ ವಿಷಯದಲ್ಲಿ ವಾದ ಮಾಡುತ್ತಿಲ್ಲ. ನಾನು ತತ್ವದ ವಿಷಯವನ್ನು ಮಾತನಾಡುತ್ತಿದ್ದೇನೆ. ನೂರಾರು ಎಕರೆ ಸಾವಿರಾರು ಎಕರೆ ಜಮೀನುಗಳನ್ನು ಇಟ್ಟುಕೊಂಡಿದ್ದವರು ಅದನ್ನೆಲ್ಲಾ ಮಾರಿ ಹಣ ಸಂಪಾದನೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರಿ. ಆದರೆ ಇವೊತ್ತು ಬಡವರ ಮೇಲೆ ತೆರಿಗೆಯನ್ನು ವಿಧಿಸುವುದಕ್ಕೆ ಹೊರಟಿದ್ದೀರಿ. ಬಲಿಷ್ಠರಾದ ಜನಗಳಿಂದ ತೆರಿಗೆಯನ್ನು ವಸೂಲು ಮಾಡುವುದಕ್ಕೆ ಮೊಟ್ಟ ಮೊದಲು ಶಾಸನವನ್ನು ತಂದು ಅದರ ಜೊತೆಯಲ್ಲಿಯೇ ಇದನ್ನೂ ಮಂಡಿಸಿದ್ದರೆ ಆಗ ನಾನು ಒಪ್ಪುತ್ತಿದ್ದೆ. ನೂರಾರು ಎಕರೆ ಸಾವಿರಾರು ಎಕರೆ ಜಮೀನನ್ನು ಇಟ್ಟುಕೊಂಡಿದ್ದವರಿಗೆ ಅದನ್ನು ಮಾರಿ ಹಣವನ್ನು ಸಂಪಾದನೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟು ಇವೊತ್ತು ಸರ್ಕಾರದವರ ನಿಶ್ಶಕ್ತಿಯನ್ನು ತೋರಿಸುತ್ತಿದೆ. ಬಡವರು ಭಾಗ್ಯವಂತರಾಗುವುದಕ್ಕೆ ಏತಕ್ಕೆ ಅವಕಾಶವನ್ನು ಮಾಡಲಿಲ್ಲ ? ಸರ್ಕಾರ ಮಾಡುವ ತಪ್ಪಿಗೆ ಸಾರ್ವಜನಿಕರು ತರೆಬಾಗುವುದು ನ್ಯಾಯವೂ ಅಲ್ಲ, ಅದರಲ್ಲಿ ಯಾವ ನೀತಿಯೂ ಇಲ್ಲ. ಜಲಾಶಯವನ್ನು ಕಟ್ಟುವುದಕ್ಕೆ ಮುಂಗಡವಾಗಿ ಹಣವನ್ನು ಕೊಡಿ ಎಂದು ಹೇಳಿ ರೈತರಿಂದ ಹೆಚ್ಚಿಟ್ಟಿನ ರುಜು ಹಾಕಿಸಿಕೊಳ್ಳತಕ್ಕಂಥ ಈ ಮಸೂದೆ ಏನಿದೆ ಶಾಸನ ಏನಿದೆ ಇದು ಕರಾಳ ಮಸೂದೆ, ಕರಾಳ ಶಾಸನ ಎಂದು ಹೇಳಬಹುದು. ಇದಕ್ಕೆಲ್ಲಾ ಹಣಬೇಕಾದರೆ ಈ ಹಣವನ್ನು ಕೊಡುವವರು ಇದ್ದಾರೆ. ಇದಕ್ಕೆ ಯಾವ ರೀತಿ ಹಣವನ್ನು ಒದಗಿಸಬೇಕು ಎಂಬುದು ಸರ್ಕಾರದ ಗಮನದಲ್ಲಿಲ್ಲ. ಬಡವರನ್ನು ಹಿಡಿದು ಜಂಜಾಡಿಸುವುದಕ್ಕೆ ಸರ್ಕಾರದವರು ಹೋಗುತ್ತಿದ್ದಾರೆಯೇ ವಿನಾ ಶಕ್ತಿವಂತರು ಮತ್ತು ಶ್ರೀಮಂತರನ್ನು ಹಿಡಿದು ಅವರಿಂದ ಹಣವನ್ನು ವಸೂಲು ಮಾಡುವುದಕ್ಕೆ ಇವರಿಗೆ ಸಾಮರ್ಥ್ಯವಿಲ್ಲ. ಎರಡನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕಾಗಿ 130 ಕೋಟಿ ರೂಪಾಯಿಗಳನ್ನು ಒದಗಿಸಿದ್ದರು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 350 ಕೋಟಿ ರೂಪಾಯಿಗಳನ್ನು ಒದಗಿಸಿದ್ದರು. ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ 440 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ರೀತಿ ಈ ಯೋಜನೆಗಳಿಗೆ ಖರ್ಚು ಮಾಡಿದಂತಹ ಹಣವೆಲ್ಲಾ ಎಲ್ಲಿ ಹೋಯಿತು ? ಇದು ಸ್ವಲ್ಪ ವಿಚಾರ ಮಾಡತಕ್ಕ ವಿಚಾರ ಎಂದರೆ ಯಾರ ಜೇಬಿನಲ್ಲಿಯೂ ಈ ಹಣವನ್ನು ಹಾಕಿದ್ದಾರೆ ಎಂದು ನಾನು ಹೇಳುವುದಿಲ್ಲ. ಉಪಯೋಗಕ್ಕೆ ಬಾರದೆ ಇರತಕ್ಕ ಕೆಲವು ಕೆಲಸಗಳಿಗೆ ಸರ್ಕಾರದವರು ಹಣವನ್ನು ಖರ್ಚು ಮಾಡಿದ್ದಾರೆ. ಕೆಲವು ದೊಡ್ಡ ದೊಡ್ಡ ಯೋಜನೆಗಳಿಗೆ ಅರ್ಥವಿಲ್ಲದ ರೀತಿಯಲ್ಲಿ ಹಣವನ್ನು ಖರ್ಚು ಮಾಡಿದ್ದಾರೆ. ಹೆಂಡದ ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ, ಅದರಲ್ಲಿ ಎಷ್ಟು ಬೇಕಾದರೂ ಹಣ ಸಿಗುತ್ತದೆ ಎಂದು ನಾಳೆ

ಕಳ್ಳಕಾಕರಿಗೆ ಲೈಸೆನ್ಸ್ ಕೊಟ್ಟರೆ ಇನ್ನೂ ಹಣ ಬರಬಹುದು. ಅದಕಾರಣ ಇಲ್ಲ, ಆ 200-300-500 ರೂಪಾಯಿಗೋಸ್ಕರ ವಿರೋಧ ಮಾಡುತ್ತಿಲ್ಲ, ಮತ್ತು ದುಡ್ಡು ಹೆಚ್ಚು ಕಡಿಮೆಯ ಪ್ರಶ್ನೆಯಲ್ಲ. ಇದು ತತ್ವಶಃ ಸರಿಯಲ್ಲವೆಂದು ವಿರೋಧ ಮಾಡುತ್ತೇನೆ. ಹಿಂದೆ ಒಂದು ಕಾಲದಲ್ಲಿ ನ್ಯಾಯವಿದ್ದದ್ದು ಇಂದು ಅನ್ಯಾಯವಾಗಬಹುದು. ಬಹುಕಾಲದಿಂದ ಭೂಕಂದಾಯ ಎಂಬುದು ಮೂಲಭೂತವಾದುದು. ಇವತ್ತಿನ ದಿವಸ ಅದು ತತ್ವಶಃ ಸರಿಯಲ್ಲ. ಇವತ್ತು ನೀವು ಮಾಡುವಂತದ್ದು ಬಹು ಹೇಯಕರವಾದ ವಿಷಯ.

5-00 P.M.

ಇದರಲ್ಲಿ ತತ್ವಶಃ ಭಿನ್ನಾಭಿಪ್ರಾಯ ಇದೆ. ಇವತ್ತು ದೊಡ್ಡವರು, ದೊಡ್ಡ ಮನೆಗಳನ್ನು ಕಟ್ಟಿಕೊಂಡವರು, ಅಂಥವರಿಂದ ವಸೂಲು ಮಾಡಲು ನಿಮ್ಮ ಕೈಯಲ್ಲಿ ಶಕ್ತಿ ಇಲ್ಲ. ಅದ ಕಾರಣ, ಇನ್ನೊಂದು ಆಕ್ಟ್ ಬರುತ್ತದೆ, ಆ ಸಮಯದಲ್ಲಿ ಹೆಚ್ಚಿನ ಮಾಹಿತಿಗಳನ್ನು ಕೊಡುತ್ತೇನೆ. ಅದು ಕೂಡ ಒಂದು ಕರಾಳ ಶಾಸನವಾಗುತ್ತದೆ. ಇದು ತತ್ವಶಃ ನೀತಿಗೆ ವಿರೋಧವಾದುದು, ಆದುದರಿಂದ ನಾನು ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

Sri D. DEVARAJ URS.—Sir, the Hon'ble Member was pleased to say that he would have no objection to this measure if only the Government is also prepared to bring a similar measure to extract money from all persons similarly placed who are round about Bnngalore or Mangalore or elsewhere, wherever prices of land have gone up not as a result of his own efforts. If Government is prepared to extract money from such people, he will have no objection to this Bill. His only objection is, why do you want to penalise only one section of people bly a levy of this kind ? All that he wants is that Government shouad take steps to bring forward a measure by which they could take awny money by way of contributions out of the enhanced prices. I think, I can cite as an instance the Urban Development Bill which is designed for that purpose. That may be one such measure. I am also one of those who would like the Government to take action to extract money from all those people who would become rich. But there is no fun in saying that because you have not done that, we shall argue against this Bill. I am also one with the Hon'ble Member in urging upon the Government to bring such a measure.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಬಡಪಾಯಿಗಳು ಏನಿದ್ದಾರೆ, ಅವರಿಂದ ನೀವು ಇವತ್ತು ವಸೂಲು ಮಾಡುತ್ತಿದ್ದೀರಿ. ಇವತ್ತಿನ ದಿವಸ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳಿಂದ ಯಥೇಚ್ಛವಾಗಿ ಸಂಪಾದನೆ ಮಾಡಿದ ಜನರಿದ್ದಾರೆ. ಒಂದು ಅಜ್ಞೆಯನ್ನು ಮಾಡಿದ ಮರುಗಳಿಗೆಯಲ್ಲೇ ಲಕ್ಷಗಟ್ಟಲೆ ಸಂಪಾದನೆ ಮಾಡಿದ್ದಾರೆ. ಆಜ್ಞೆಯನ್ನು ತಿರುಗಿ ಹಿಂತೆಗೆದ ಕೂಡಲೇ ಅದರಲ್ಲೂ ಲಕ್ಷಗಟ್ಟಲೆ ಸಂಪಾದನೆ ಮಾಡಿದವರಿದ್ದಾರೆ. ಈ ರೀತಿ ಬಹಳ ಜನರು ಹಣವಂತರಾಗಿದ್ದಾರೆ. ಬಡಜನರು ನೀರನ್ನು ಕೊಟ್ಟು ಹಣವಂತರು ಅನುಕೂಲಪಡೆದುಕೊಂಡಿದ್ದಾರೆ. ಇವತ್ತು ಹಣವಂತರನ್ನು ಏನೂ ಮಾಡುವುದಕ್ಕಾಗುವುದಿಲ್ಲ. ನನ್ನ ಒಂದು ಉದಾಹರಣೆಯೇ ಇದೆ. ಮೂವತ್ತೈದು ವರ್ಷದಿಂದ ಬೇಕಾದಷ್ಟು ಹಣ ಸಂಪಾದನೆ ಮಾಡಬೇಕೆಂದು ಉದ್ದೇಶ ವಿದ್ದರೂ ಹಣ ಸಂಪಾದನೆ ಮಾಡುವುದಕ್ಕಾಗಲಿಲ್ಲ. ಅದಕಾರಣ ಈ ಬಿಲ್ ಯಾರ್‍ಯಾರು, ನಿಷ್ಕಾರುಣ್ಯದಿಂದ ಹಣ ಸಂಪಾದನೆ ಮಾಡಿದ್ದಾರೆ, ಅವರಿಂದ ಹಣವನ್ನು ವಸೂಲು ಮಾಡುವಂತೆ ಒಂದು ಸಮನ್ವಯವಾಗುವಂತ ರೀತಿಯಲ್ಲಿ ಇದ್ದರೆ, ಆಗ ನಾನು ಅದಕ್ಕೆ ಒಪ್ಪಿಗೆ ಕೊಡಬಹುದೇ ವಿನಹ ಮೂಕ ಪ್ರಾಣಿಗಳನ್ನು ಇಲ್ಲಿ ತಂದರೆ ಏನು ಪ್ರಯೋಜನ? ಇದು ನಿಮ್ಮ ತಪ್ಪಲ್ಲ. ಇದಕ್ಕೆ ಮಹತ್ತರವಾದ ಕಾರಣಗಳಿವೆ. ಇದು ಇಡೀ ಮೈಸೂರು ರಾಜ್ಯದಲ್ಲಿ ಭರತಖಂಡದಲ್ಲೇ ಬಂದಿರತಕ್ಕಂಥ ಒಂದು ಜಾಡ್ಯ. ಅಂಥವುಗಳನ್ನು ಹೋಗಲಾಡಿಸುವ ಮಹಾನುಭಾವ ಯಾರಾದರೂ ಬಂದರೆ, ನಾನು ಧನ್ಯ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

Sri A. R. PANCHAGAVI.—Sir......

Mr. SPEAKER.—There are many Hon'ble Members to speak. As There is not much time, I request Sri Panchagavi to be very brief.

Sri H. SIDDAVEERAPPA.—The discussion is tending to be very informative. I request the Speaker to allow a little more time and not to impose time limit.

Mr. SPEAKER.—In view of the fact that we are sitting for only a few days more and probably this Bill has to go before the other House also if it is possible for this House to finish this Bill today, the Chair is inclined to extend the sitting by one hour. Let as many Hon'ble Members as desire to speak, offer their comments. I have no objection. But let them not spend time covering the ground already covered. Let there be no repetition and let them be brief.

Sri S. S. SHETTAR.—It would have been better if the other Bill also had been taken up together. We could have discussed them better.

† ಶ್ರೀ ಎ. ಆರ್. ಪಂಚಗಾವಿ (ಅರಭಾವಿ).—ಸ್ವಾಮಿ, ನಮ್ಮ ಮುಂದಿರುವ ಮಸೂದೆ, ಮತ್ತು ಇದರ ಚರ್ಚೆ ಸೀಮಿತವಾಗಿದೆ. ಅನೇಕ ಮಿತ್ರರು ಇದರ ಮೂಲ ತತ್ವದ ಬಗ್ಗೆ ಬಹಳವಾಗಿ ಚರ್ಚೆ ಮಾಡಿದ್ದಾರೆ. ಇದರ ಮೂಲ ತತ್ವವನ್ನು 1950ನೇ ಇಸವಿಯಲ್ಲಿ ಒಪ್ಪಿದ್ದೇವೆ. ನಂತರ ಮಂತ್ರಿಯಾಗಿದ್ದವರೂ ಕೂಡ ಅನೇಕರು ಈ ಮೂಲ ತತ್ವಗಳಿಗೆ ಕೈ ಹಾಕಿದ್ದಾರೆ. ಈಗ ಪ್ರಶ್ನೆ ಇರುವುದು ಇಷ್ಟೇ, ಕಾಂಟಿಬ್ಯೂಷನ್ ಈಗ 300 ಇರಬೇಕೇ, 500 ಇರಬೇಕೇ ಎಂಬುದು. 300 ರೂಪಾಯಿ ಇದ್ದರೆ, ಪುನಃ ನಾವು ಬಂಡವಾಳ ಏನು ಹಾಕಬೇಕು ಅದಕ್ಕೆ ಹಣ ಸಾಲದೇ ಕಡಿಮೆಯಾಗಬಹುದು. ಆದ್ದರಿಂದ 300 ರೂಪಾಯಿ ಇರುವುದನ್ನು 500 ರೂಪಾಯಿಗೆ ಏರಿಸುವುದಕ್ಕೆ ಸರ್ಕಾರ ಇಚ್ಛೆ ಮಾಡಿದೆ. 500 ಆಗಲಿಕ್ಕೆ ಯಾವ ರೀತಿಯಲ್ಲಿಯೂ ಅಡ್ಡಿ ಇಲ್ಲ. ಆದರೆ ಇದನ್ನು ಮಾಡುವಾಗ ಕೆಲವು ಮಾತುಗಳನ್ನು ಮುಂದೆ ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಈಗ ಈ ಮಸೂದೆಯನ್ನು ಅಮಲಿನಲ್ಲಿ ತಂದು ಮುಂದೆ ಯಾವ್ಯಾವ ಯೋಜನೆಗಳ ಮೇಲೆ ಹಣವನ್ನು ವಸೂಲು ಮಾಡುತ್ತೀರೋ ಅದರ ಬಗ್ಗೆ ವಾಟರ್ ರೇಟ್ ಹಾಕುತ್ತೀರಿ, ವಾಟರ್ ರೇಟ ಹಾಕುವಾಗ ಅದಕ್ಕೆ ಸಂಬಂಧ ಪಟ್ಟಂತೆ, ಬಡ್ಡಿಯನ್ನೂ ಮತ್ತು ಅಧಿಕಾರಿಗಳ ಸಂಬಳವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಿ. ಬಂಡವಾಳದ ಕೆಲವು ಭಾಗ ವಸೂಲುಮಾಡಿದ್ದರಮೇಲೆ ಬಡ್ಡಿ ಅಂಶ ಕಡಿಮೆಯಾಗುತ್ತದೆ. ಆ ಪ್ರಮಾಣದಲ್ಲಿ ವಾಟರ್ ರೇಟ್ ಇಳಿಸಬೇಕು. ಯಾವಾಗ ರೈತರು ಬೆಟರ್‌ಮೆಂಟ್ ಲೆವಿ ಕೊಡುತ್ತಾರೋ ಅದರ ಲಾಭ ಅವರಿಗೆ ಸಿಗಬೇಕು ಎಂಬುದಾಗಿ ನಾನು ಹೇಳುತ್ತೇನೆ. ಈ ವಿಚಾರವನ್ನು ಸರ್ಕಾರದವರು ಲಕ್ಷ್ಯದಲ್ಲಿಟ್ಟು ಕೊಳ್ಳಬೇಕು.

ಇನ್ನೊಂದು ಮಾತು. ಬೆಟರ್‌ಮೆಂಟ್ ಲೆವಿಯನ್ನು ವಸೂಲುಮಾಡುವಾಗ ಯಾವ ಕೆಲಸಕ್ಕೆ ನೀವು ಕೈಹಾಕುತ್ತೀರೋ ಆ ಕೆಲಸ ಪೂರ್ತಿಯಾದಮೇಲೆ ಅದನ್ನು ವಸೂಲುಮಾಡಬೇಕು. ಈ ಕೆಲಸಕ್ಕೆ ಇಷ್ಟೇ ಖರ್ಚಾಗುತ್ತದೆಂಬುದಾಗಿ ಹೇಳುವುದು ಕಠಿಣವಾದೀತು. ಎಲ್ಲಾ ಕೆಲ್ಲಸದ ಮೇಲೆ 500 ರೂಪಾಯಿಗಳ ಪರಮಾವಧಿಯನ್ನು ಹಾಕಿದ್ದೀರಿ. ಆದರೆ ಪೂರ್ತಿಯಾಗಿ ವಸೂಲು ಮಾಡಬೇಕೆಂದಲ್ಲ. ಕೆಲವು ಅತ್ಯಂತ ಕಡಿಮೆ ಖರ್ಚಾಗಿ ಅತ್ಯಂತ ಲಾಭವಾಗಬಹುದು. 500 ರೂಪಾಯಿಗಳನ್ನು ಅವರಮೇಲೆ ಹಾಕುವುದು ಸರಿಯಲ್ಲ. 100-200 ರೂಪಾಯಿಗಳನ್ನು ಅದಕ್ಕೆ ಹಾಕಬಹುದು. ಅದನ್ನೂ ಕೂಡ ಸರ್ಕಾರದವರು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

ಇನ್ನು ಆಲ್ಟರೇಷನ್ ಪ್ರಶ್ನೆ ಬರುತ್ತದೆ. ಈ ಆಲ್ಟರೇಷನ್ನಿಗೋಸ್ಕರ ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದರೆ, ಬೆಟರ್‌ಮೆಂಟ್ ಲೆವಿ ಹಾಕುವ ಹಕ್ಕು ಬಂದಿದೆಯೆಂದು ಸರ್ಕಾರದವರು ಪ್ರತಿಪಾದಿಸಬಹುದು. ಅದರ ಬಗ್ಗೆ ಸಾಕಷ್ಟು ಸೇಫ್ ಗಾರ್ಡ್ ಈಗಲೇ ಹಾಕುವುದು ಉತ್ತಮ. ರೈತರಿಗೆ ಯೋಗ್ಯ ಲಾಭವಾದರೆ ಮಾತ್ರ ಅವರಿಂದ ಬೆಟರ್‌ಮೆಂಟ್ ಲೆವಿಯನ್ನು ವಸೂಲುಮಾಡಬೇಕು. ಅಲ್ಪಸ್ವಲ್ಪ ಸಣ್ಣಸಣ್ಣ ಯೋಜನೆಗಳ ಮೇಲೆ ಮತ್ತೆ ಬೆಟರ್‌ಮೆಂಟ್ ಲೆವಿ ಹಾಕುವುದು, ಅದನ್ನು ರೈತರ ಮೇಲೆ ಜಾರಿಮಾಡುವುದು ಸರಿಯಲ್ಲ. ಇದೇ ಪ್ರಕಾರ ಅನೇಕ ಕಡೆಗಳಲ್ಲಿ 4 ತಿಂಗಳು ನೀರು ಕೊಡುತ್ತಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ 8 ತಿಂಗಳು ನೀರು ಕೊಡುತ್ತಿದ್ದಾರೆ. ಅವು ಬಹಳ ಹಳೆಯ ಯೋಜನೆಗಳಾಗಿವೆ. ಒಂದು ತಿಂಗಳು ಅಥವಾ 20 ದಿವಸಗಳು ಹೆಚ್ಚು ನೀರು

ಕೊಟ್ಟರೆ, ಅದು ಅಲ್ಟರೇಷನ್ ಆಗುತ್ತದೆ. ಅದಕ್ಕೆ ಮತ್ತೆ ಬೆಟರ್‌ಮೆಂಟ್ ಲೆವಿ ಕೊಡಿ ಎಂದು ಕೇಳುವುದು ಸರಿಯಲ್ಲ. ಒಂದುವೇಳೆ ಯೋಗ್ಯವಾದ ಲಾಭ ರೈತರಿಗೆ ಸಿಕ್ಕಿದರೆ ಅಂತಹ ಸಂದರ್ಭದಲ್ಲಿ ಈ ಹಣವನ್ನು ವಸೂಲು ಮಾಡಬೇಕು. ಒಟ್ಟಿನಲ್ಲಿ ರೈತರಿಗೆ ಯೋಗ್ಯ ರಕ್ಷಣೆ ಕೊಟ್ಟು ಈ ಮಸೂದೆಯನ್ನು ಅಮಲಿನಲ್ಲಿ ಸರ್ಕಾರದವರು ತರುವುದಕ್ಕೆ ಏನೂ ಅಡ್ಡಿ ಇಲ್ಲವೆಂದು ಹೇಳಬಯಸುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಮಾನ್ಯ ಸಭಾಧ್ಯಕ್ಷರೇ, ಈ ಬೆಟರ್‌ಮೆಂಟ್ ಲೆವಿಯನ್ನು ಯಾವ ಜಮೀನುಗಳ ಮೇಲೆ ವಸೂಲುಮಾಡಬೇಕು, ಯಾವ ಜಮೀನುಗಳ ಮೇಲೆ ವಸೂಲುಮಾಡಬಾರದು ಎಂದು ಹೇಳುವಾಗ ಯಾವ ಜಮೀನುಗಳಿಗೆ ಈ ನೀರು ಒದಗಿಸುವುದರಿಂದ ಬೆಳೆ ಹೆಚ್ಚಾಗುತ್ತದೆ, ಅವಕ್ಕೆ ಹಾಕಬೇಕು ಉಳಿದುದು ಕಮ್ಯಾಂಡ್‌ನಲ್ಲಿ ಬರುವುದಿಲ್ಲವೆಂದು ಹೇಳುವುದು ಒಪ್ಪತಕ್ಕಮಾತು. ಆದರೆ ಕೆಲವು ಯೋಜನೆಗಳನ್ನು ವಿಚಾರಮಾಡಿ ನೋಡುವಾಗ, ಘಟಪ್ರಭಾ ಲೆಫ್ಟ್ ಬ್ಯಾಂಕ್ ಇರ್ರಿಗೇಷನ್ ಕನಾಲ್‌ನಿಂದ ರೈತರಿಗೆ ಎಷ್ಟು ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ, ಎಷ್ಟು ದಿವಸಗಳವರೆಗೆ ರೈತರಿಗೆ ನೀರನ್ನು ಒದಗಿಸುತ್ತಾರೆಂಬುದನ್ನು ಸರ್ಕಾರ ಗಮನದಲ್ಲಿಡಬೇಕು. ಘಟಪ್ರಭಾಕ್ಕೆ ಬ್ರಿಟಿಷರ ಕಾಲದಲ್ಲಿ ದುಗ್ಗಾಳ್ ಹತ್ತಿರ ಒಂದು ಅಣೆಕಟ್ಟು ಇತ್ತು. ಅದರಿಂದ ಸುಲಭವಾಗಿ 100 ಎಕರೆಗಳು ನೀರಾವರಿಯಾಗುತ್ತಿತ್ತು. ಅಂದ ಮೇಲೆ ಈಗ ನಿಮ್ಮ ಹೊಲಗಳಿಗೆ ನೀರನ್ನು ಕೊಡುತ್ತೇವೆ, ಪ್ರತಿಯೊಂದು ಎಕರೆಗೆ 500 ರೂಪಾಯಿಗಳಿಂದ ಸಾವಿರ ರೂಪಾಯಿಗಳವರೆಗೆ ರೈತರನ್ನು ಪ್ರಚೋದಿಸಿ ಮಳೆಯಾಗದೇ ಇರುವಾಗ ಹೊಳೆಗಳಲ್ಲಿ ನೀರಿಲ್ಲ, ರಿಜರ್‌ವಾಯರ್‌ನಲ್ಲಿ ನೀರು ಇಲ್ಲದೇ ಇರುವ ಪ್ರಸಂಗದಲ್ಲಿ ಉದ್ದೇಶಪೂರ್ವಕವಾಗಿ ರೈತರನ್ನು ಚೀಟ್ ಮಾಡುವ ಪ್ರಸಂಗ ಈ ಸರ್ಕಾರದಲ್ಲಿ ಕಂಡುಬರುತ್ತಾ ಇವೆ. ರೈತರಿಗೆ ಯಾವಾಗ ಅಷ್ಯೂರ್ಡ್ ಕ್ವಾಂಟಿಟಿ ಆಫ್ ವಾಟರ್ ಕೊಡುವುದಕ್ಕೆ ಸಾಧ್ಯವಿದೆಯೋ ಇಲ್ಲವೋ ಅಂಥಾದ್ದರಲ್ಲಿ ಬೆಟರ್‌ಮೆಂಟ್ ಲೆವಿ ಹಾಕುವುದರಿಂದ, ರೈತರಿಂದ ಹೆಚ್ಚಿಗೆ ಹಣವನ್ನು ದೋಚಿಕೊಂಡು, ಸುಳ್ಳು ಆಶೆ ತೋರಿಸಿ ನೀರನ್ನು ಒದಗಿಸುತ್ತೇವೆ ಎಂದು ಹೇಳಿ, ಹೆಚ್ಚಿಗೆ ಖರ್ಚುಮಾಡುವುದಕ್ಕಾಗಿ ಅವರಲ್ಲಿ ಇದ್ದ ಜಮೀನುಗಳನ್ನು ಒತ್ತೆ ಹಾಕಿಸುವ ಪ್ರಸಂಗ ಈ ಸರ್ಕಾರದಲ್ಲಿ ಕಂಡುಬರುತ್ತಾ ಇದೆ. ಯಾವ ಯೋಜನೆಗಳನ್ನು ತಾವು ಇಂತಿಷ್ಟು ದಿವಸಗಳಲ್ಲಿ ಪೂರ್ತಿಯಾಗಿ ಮುಗಿಸುತ್ತೇವೆಂದು ಹೇಳಿದ್ದೀರಿ? ಯಾವ ಯೋಜನೆಗಳಿಂದ 8 ತಿಂಗಳವರೆಗೆ ಕನಿಷ್ಠಪಕ್ಷ 3 ಅಥವಾ 4 ತಿಂಗಳವರೆಗೆ ಆದರೂ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆಯೆಂದು ಇದು ಖಾತರಿ ಇರುವಾಗ ಬೆಟರ್‌ಮೆಂಟ್ ಲೆವಿಯನ್ನು ವಸೂಲು ಮಾಡುವ ಅಧಿಕಾರವನ್ನು ಸರ್ಕಾರದ ಅಧಿಕಾರಿಗಳಿಗೆ ಕೊಡಬೇಕು. ಸಿಕ್ಕಾಬಟ್ಟೆ ಆಡಳಿತ ಖರ್ಚನ್ನು ಹಾಗೂ ಮಂತ್ರಿವರ್ಗದ ಖರ್ಚನ್ನು ಪೂರೈಸುವುದು ಸರ್ಕಾರದ ಬೊಕ್ಕಸಕ್ಕೆ ಸಾಧ್ಯವಿಲ್ಲವೆಂದು ಕಂಡುಬಂದಾಗ ಸಾರಾಯಿ, ಸೇಂದಿ ಅಂಗಡಿಗಳನ್ನು ಖುಲ್ಲಾ ಮಾಡಿದರೂ ಕೂಡ ಇದರಿಂದಲೂ ಸಾಕಷ್ಟು ಹಣ ಸರ್ಕಾರದ ಬೊಕ್ಕಸಕ್ಕೆ ಬರಲಿಲ್ಲ. ಯಾರು ಹಳ್ಳಿಜನರು ಇಗ್ನೋರೆಂಟ್ ರೈತರು ಇದ್ದಾರೋ ಅವರ ಕಡೆಯಿಂದ ಹಣವನ್ನು ದೋಚಿಕೊಳ್ಳುವುದರಿಂದ ಸರ್ಕಾರಕ್ಕೆ ತಾತ್ಕಾಲಿಕವಾಗಿ ಲಾಭವಾಗಬಹುದು. ಅವರಿಂದೇನೂ ದೇಶಕ್ಕೆ ಲಾಭವಾಗುವುದಿಲ್ಲ. ಅದಕ್ಕಾಗಿ ಸರ್ಕಾರದವರು ಈ ಮಸೂದೆಯನ್ನು ಕಾಂಗ್ರೆಸಿನವರು ಪಾಸ್ ಮಾಡಿಕೊಳ್ಳುವಾಗ ಒಂದು ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಯಾವ ಯೋಜನೆಯಿಂದ ನಿರ್ದಿಷ್ಟ ಅವಧಿಯೊಳಗೆ, ನಿರ್ದಿಷ್ಟ ಪ್ರಮಾಣದಲ್ಲಿ ನಿರ್ದಿಷ್ಟ ಕ್ಷೇತ್ರಕ್ಕೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆಯೋ ಅಂತಹುಗಳಿಗೆ ಈ ಬೆಟರ್‌ಮೆಂಟ್ ಲೆವಿಯನ್ನು ಪ್ರತಿ ಎಕರೆಗೆ 300 ರೂಪಾಯಿಗಳೆಂದು ಇಟ್ಟುಕೊಂಡು ವಸೂಲುಮಾಡಬೇಕು. ಉಳಿದ ಯಾವ ಯೋಜನೆಗಳು ಸಂಪೂರ್ಣವಾಗಿ ಆಗಿಲ್ಲವೋ ಎಲ್ಲಿ ಸರ್ಕಾರಕ್ಕೆ ನೀರನ್ನು ಒದಗಿಸುವುದು ಖಾತರಿಯಾಗಿ ಸಾಧ್ಯವಾಗಿಲ್ಲವೋ ಅಂತಹ ಜಮೀನುಗಳ ಮೇಲೆ ಈ ಬೆಟರ್‌ಮೆಂಟ್ ಲೆವಿಯನ್ನು ಹಾಕಬಾರದೆಂಬುದಾಗಿ ಒಂದು ಕ್ಲಾಜನ್ನು ಈ ಮಸೂದೆಯಲ್ಲಿ ಸೇರಿಸಿದರೆ, ಈ ಮಸೂದೆಯನ್ನು ಪಾಸ್‌ಮಾಡಿಕೊಳ್ಳುವುದಕ್ಕೆ ಏನೂ ಅಭ್ಯಂತರವಿಲ್ಲವೆಂದು ನನ್ನ ಅಭಿಪ್ರಾಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† Sri S. S. SHETTAR.—Mr. Speaker, I rise to oppose this Bill which is to raise the betterment levy from Rs.300 to Rs.500. As one of the members pointed out Government is unable to levy the betterment fee in that part on humanitarian consideration. At this juncture it is not good again to raise this levy from Rs.300 to Rs. 500. Sir, in my opinion, the levy itself is irrational, baseless and there is no justification for Government to levy this. If Government finds that the cultivator is

(SRI S. S. SHETTAR)

benefited, there must be some rational basis to recover certain levies. If any water is supplied, Government has not supplied it free of cost. They are charging water rate to the cultivator. Let the Government increase the rates of these irrigation charges in case they want funds for other projects or other schemes. But it is not good that this should be raised for various reasons because this will hamper the cultivator's initiative to produce more. If the value of the property is more and there is speculation in the value of the land, there are ways and means to tax a particular person. We are now facing food crisis and we have to make the agriculture industry most efficient. Under the circumstances there is a liability on the part of the Government also to supply water by whatever scheme it may like. The Clause 4 has retrospective effect and this retrospective effect is very dangerous. When huge arrears are pending to be collected, to put again additional burden on the cultivator when it is impossible for him to pay is wrong and I oppose this measure.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ನೀರಾವರಿ ಖಾತೆಯ ಉಪಮಂತ್ರಿಗಳು ಇರಿಗೇಷನ್ ಲೆವಿ ಆಫ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ವಾಟರ್ ರೇಟ್ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸುತ್ತಾ ಮಾರ್ಕೆಟ್ ವ್ಯಾಲ್ಯೂ ಜಾಸ್ತಿ ಆಗಿದೆ, ಆದ್ದರಿಂದ ಒಂದು ಎಕರೆಗೆ 500 ರೂಪಾಯಿಗಳ ನೀರಾವರಿ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ರೈತರಿಗೆ ಏನೂ ಕಷ್ಟವಾಗಲಾರದು ಎಂದು ತಿಳಿಸಿದ್ದಾರೆ. ಸಾಮಾನ್ಯವಾಗಿ ನೀರಾವರಿ ಕಾಂಟ್ರಿಬ್ಯೂಷನ್ ವಾಟರ್‌ರೇಟ್ ನಿರ್ಧರಿಸುವಾಗ ಕೇವಲ ಪ್ರೊಡಕ್ಷನ್ ಕ್ವೆಶ್ಚನ್ ಮಾತ್ರ ತೆಗೆದುಕೊಳ್ಳಬಾರದು. ಅದರಿಂದ ಆಗತಕ್ಕಂಥ ಸೋಷಿಯಲ್ ಬೆನಿಫಿಟ್ಸ್ ಏನಿವೆ ಅವುಗಳನ್ನೂ ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಪ್ರೊಡಕ್ಷನ್ ಕ್ವೆಶ್ಚನ್ ಮಾತ್ರ ಗಣನೆಗೆ ತೆಗೆದುಕೊಂಡು ಒಂದು ಎಕರೆ ಜಮೀನಿಗೆ 500 ರೂಪಾಯಿ ನೀರಾವರಿ ಕಾಂಟ್ರಿಬ್ಯೂಷನ್ ವಾಟರ್ ರೇಟು ಹಾಕಿದರೆ ಒಬ್ಬೊಬ್ಬ ರೈತ 3 ಸಾವಿರ 4 ಸಾವಿರ ರೂಪಾಯಿಗಳ ಕಾಂಟ್ರಿಬ್ಯೂಷನ್ ಕೊಡಬೇಕಾಗುತ್ತದೆ. ಆದ್ದರಿಂದ ಒಂದು ಎಕರೆಗೆ 500 ರೂಪಾಯಿಗಳ ಕಾಂಟ್ರಿಬ್ಯೂಷನ್ ಕೊಡುವುದು ರೈತರಿಗೆ ತೊಂದರೆಯಾಗುವುದಿಲ್ಲ ಎಂದು ಹೇಳುವುದು ಅಷ್ಟು ಸೂಕ್ತವಲ್ಲ. ನೀವು ಯಾವ ಆಧಾರದ ಮೇಲೆ ಭೂಮಿಯ ಬೆಲೆಯನ್ನು ನಿರ್ಧರಿಸುತ್ತೀರಿ ? ನೀರು ಬಂದ ಮಾತ್ರಕ್ಕೇ ಜಮೀನಿನ ಬೆಲೆ ಜಾಸ್ತಿಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಭೂಮಿ ಫಲವತ್ತಾಗಿರಬೇಕು, ಅಬಾದು ಮಾಡಿರಬೇಕು. ಅಂಥಾ ಜಮೀನಿಗೆ ಬೆಲೆ ಜಾಸ್ತಿಯಾಗುತ್ತದೆಯೇ ವಿನಾ ಎಲ್ಲಾ ಜಮೀನಿಗೂ ಬೆಲೆ ಜಾಸ್ತಿಯಾಗುತ್ತದೆ ಎಂದು ಹೇಳುವುದು ಅಷ್ಟು ಸೂಕ್ತ ತೋರುವುದಿಲ್ಲ. ಜಮೀನಿನ ಬೆಲೆಯನ್ನು ನಿಷ್ಕರ್ಷೆ ಮಾಡುವಾಗ ಏನೇನು ವಿಷಯಗಳನ್ನು ಸಂಗ್ರಹಿಸಬೇಕೋ ಅದನ್ನೆಲ್ಲಾ ಸಂಗ್ರಹಿಸಬೇಕು. ಆದರೆ ಯಾವುದೋ ಒಂದು ವಿಷಯವನ್ನು ಮಾತ್ರ ಗಣನೆಗೆ ತೆಗೆದುಕೊಂಡು ಒಂದು ಎಕರೆಗೆ 500 ರೂಪಾಯಿಗಳ ಕಾಂಟ್ರಿಬ್ಯೂಷನ್ ಹಾಕಿದರೆ ಅದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಕೃಷ್ಣರಾಜಸಾಗರ ಅಣೆಕಟ್ಟನ್ನು ಕಟ್ಟುವಾಗ ಒಂದು ಎಕರೆ ಭೂಮಿಗೆ 300 ರೂಪಾಯಿಗಳ ಕಾಂಟ್ರಿಬ್ಯೂಷನ್ ಹಾಕಿದ್ದಾರೆ ಎಂದು ಮಾನ್ಯ ಶ್ರೀ ದೇವರಾಜ ಅರಸ್ ಅವರು ಹೇಳಿದರು. ಅದು ಸತ್ಯಕ್ಕೆ ದೂರವಾದ ಮಾತು. ಆ ಕಾಲದಲ್ಲಿ ಒಂದು ಎಕರೆ ಜಮೀನಿಗೆ 120 ರೂಪಾಯಿಗಳ ಕಾಂಟ್ರಿಬ್ಯೂಷನ್ ಹಾಕಿದ್ದರು. ಅದೂ ಸಹ ನೀರು ಸಪ್ಲೈ ಮಾಡಿದ ಮೇಲೆ ಕಾಂಟ್ರಿಬ್ಯೂಷನ್ ಹಾಕಿದರೇ ವಿನಾ ನೀರು ಜಮೀನಿಗೆ ಸಪ್ಲೈ ಮಾಡುವುದಕ್ಕಿಂತ ಮುಂಚೆ ಕಾಂಟ್ರಿಬ್ಯೂಷನ್ ಹಾಕಲಿಲ್ಲ. ಒಂದು ಎಕರೆಗೆ 120 ರೂಪಾಯಿ ಕಾಂಟ್ರಿಬ್ಯೂಷನ್ ಹಾಕಿದಂಥಾದ್ದನ್ನೇ ಕೊಡಲಾರದೆ ಬಹು ಮಂದಿ ರೈತರು ತಮ್ಮ ಜಮೀನುಗಳನ್ನು ಮಾರಬೇಕಾದಂತಹ ದಾರುಣ ಪ್ರಸಂಗ ಉಂಟಾಯಿತು. ಈಗ ಅಭಾವ ಪರಿಸ್ಥಿತಿ ಇದೆ. ಕಳೆದ 3–4 ವರ್ಷಗಳಿಂದ ಬೆಳೆಯನ್ನೇ ಬೆಳೆಯುತ್ತಿಲ್ಲ. ಇಂಥಾ ಪ್ರದೇಶದಲ್ಲಿ ಹೇಮಾವತಿ ಅಣೆಕಟ್ಟು ಬರುತ್ತದೆ, ಈ ಪ್ರದೇಶದಲ್ಲಿ ಒಂದು ಎಕರೆಗೆ 500 ರೂಪಾಯಿಗಳ ಕಾಂಟ್ರಿಬ್ಯೂಷನ್ ಕೊಡಿ, ನೀರಾವರಿ ಕಾಮಗಾರಿ ಕೆಲಸಗಳನ್ನು ಕೈಗೊಳ್ಳುತ್ತೇವೆ ಎಂದು ಮುಂಗಡವಾಗಿ ಕಾಂಟ್ರಿಬ್ಯೂಷನ್ ಕೇಳಿದರೆ ರೈತ ಎಲ್ಲಿಂದ ತಂದುಕೊಡಬೇಕು ಎಂಬುದನ್ನು

ಸರ್ಕಾರದವರು ಯೋಚನೆ ಮಾಡಬೇಕು. 5 ಎಕರೆ ಜಮೀನಿಗಿಂತ ಕಡಿಮೆ ಇರತಕ್ಕ ಜಮೀನ್ದಾರರು 8 ಕಂತುಗಳಲ್ಲಿಯೂ, 5 ಎಕರೆ ಜಮೀನಿಗಿಂತ ಮೇಲ್ಪಟ್ಟು ಇದ್ದವರು 4 ಕಂತುಗಳಲ್ಲಿಯೂ ಕಾಂಟ್ರಿಬ್ಯೂಷನ್ ಹಣವನ್ನು ಕೊಡಬೇಕೆಂದು ಹೇಳುತ್ತಾರೆ. 5 ಎಕರೆ ಜಮೀನು ಇರತಕ್ಕ ರೈತ ಸುಮಾರು 2½ಸಾವಿರ ರೂಪಾಯಿಗಳ ಕಾಂಟ್ರಿಬ್ಯೂಷನ್ ಕೊಡಬೇಕಾದರೆ ಅವನು ಯಾರ ಹತ್ತಿರವಾದರೂ ಹೆಚ್ಚಿನ ಬಡ್ಡಿಯನ್ನು ಕೊಟ್ಟು ಹಣವನ್ನು ತಂದುಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ 500 ರೂಪಾಯಿಗಳ ಕಾಂಟ್ರಿಬ್ಯೂಷನ್ ಒಂದು ಎಕರೆಗೆ ಕೊಡಬೇಕೆಂದು ಮಾಡಿರುವುದು ಅಷ್ಟು ಒಳ್ಳೆಯದಲ್ಲ. ಅದೂ ಅಲ್ಲದೆ ಕಾಂಟ್ರಿಬ್ಯೂಷನ್ ಹಾಕುವಾಗ ಜಮೀನ್ದಾರ ಮಾತ್ರ ನೀರನ್ನು ಉಪಯೋಗಿಸುತ್ತಾನೆಯೇ, ಆ ನೀರಾವರಿ ಯೋಜನೆಗಳು ಇನ್ನು ಯಾವ ಯಾವುದಕ್ಕೆ ಉಪಯೋಗ ಮಾಡಲ್ಪಡುತ್ತವೆ ಎಂಬುದನ್ನೂ ಆಲೋಚನೆ ಮಾಡಬೇಕಾಗುತ್ತದೆ. ಸರ್ಕಾರ ಕೈಗೊಳ್ಳತಕ್ಕ ನೀರಾವರಿ ಯೋಜನೆಗಳು ವಿವಿಧೋದ್ದೇಶಗಳಿಂದ ಕೂಡಿರುತ್ತವೆ. ಪವರ್ ಪ್ರೊಡಕ್ಷನ್ ಇರುತ್ತದೆ. ಪಬ್ಲಿಕ್ ವಾಟರ್ ಸಪ್ಲೈ ಇರುತ್ತದೆ. ಅನೇಕ ಬೃಂದಾವನ ಗಾರ್ಡನ್‌ಗಳಿಗೆ ನೀರನ್ನು ಉಪಯೋಗ ಮಾಡುತ್ತಿರುತ್ತಾರೆ. ಅಗ್ರೋ ಇಂಡಸ್ಟ್ರೀಗೆ ಉಪಯೋಗವಾಗುತ್ತಿರುತ್ತದೆ. ಸಕ್ಕರೆ ಕಾರ್ಖಾನೆಗೆ ನೀರು ಉಪಯೋಗವಾಗುತ್ತಿರುತ್ತದೆ. ಅದನ್ನೂ ಸಹ ಸರ್ಕಾರದವರು ಗಮನದಲ್ಲಿಟ್ಟುಕೊಂಡು ವಾಟರ್"ರೇಟ್ ಕಾಂಟ್ರಿಬ್ಯೂಷನ್ ಹಾಕಬೇಕು. ಈಗ ಉದಾಹರಣೆಗೆ ಹೇಳುವುದಾದರೆ ಮಂಡ್ಯದಲ್ಲಿ ಸಕ್ಕರ ಕಾರ್ಖಾನೆ ಇದೆ. ಅದರಲ್ಲಿ ತಯಾರಾಗತಕ್ಕಂಥ ಸಕ್ಕರೆಯನ್ನು ಮಂಡ್ಯ ಮತ್ತು ಪಾಂಡವಪುರದ ಜನಗಳೇ ತಿನ್ನುವುದಿಲ್ಲ. ಅದು ಇಡೀ ರಾಷ್ಟ್ರಕ್ಕೆ ಉಪಯೋಗವಾಗುತ್ತದೆ. ಎಲ್ಲರಿಗೂ ಸಕ್ಕರೆಯನ್ನು ಒದಗಿಸುತ್ತಾರೆ. ಆದ್ದರಿಂದ ಇಂಥಾ ಯೋಜನೆಗಳನ್ನು ಮಾಡುವಾಗ ಅದರಿಂದ ಇತರ ಅನುಕೂಲಗಳು ಜನಗಳಿಗೆ ಏನು ಆಗುತ್ತದೆ ಎಂಬುದನ್ನೂ ತಿಳಿದು ಕಾಂಟ್ರಿಬ್ಯೂಷನ್ ನಿಗದಿ ಮಾಡಬೇಕು. ಅಲ್ಲದೆ ಈ ಮಸೂದೆಯನ್ನು ನೋಡಿದರೆ ಸರ್ಕಾರದವರ ಮನಸ್ಸಿನಲ್ಲಿ ಒಂದೇ ಸಮನಾದ ನಿರ್ದಿಷ್ಟವಾದ ಅಭಿಪ್ರಾಯ ಇಲ್ಲ ಎಂದು ಕಾಣುತ್ತದೆ. 1957ನೇ ಇಸವಿಯಲ್ಲಿ ಮಾಡಿದಂತಹ ಕಾನೂನಿಗೆ ಈಗಾಗಲೇ 5-6 ತಿದ್ದುಪಡಿಗಳನ್ನು ಮಾಡಿದ್ದಾರೆ. ಈ ಕಾಂಟ್ರಿಬ್ಯೂಷನ್ ನಿಗದಿ ಮಾಡುವಾಗ ಆ ಯೋಜನೆಯಿಂದ ಏನೇನು ಸ್ಪೆಷಲ್ ಬೆನಿಫಿಟ್ಸ್ ಆಗುತ್ತವೆಯೋ ಅದನ್ನು ಗಣನೆಗೆ ತೆಗೆದುಕೊಳ್ಳದೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಹಾಕುವುದಕ್ಕೆ ಹೊರಟಿದ್ದಾರೆ. ಒಂದು ನಿರ್ದಿಷ್ಟವಾದ ತತ್ವ ಆಡಳಿತ ಪಕ್ಷದವರಲ್ಲಿ ಇಲ್ಲ. ಸಮಯಕ್ಕೆ ಬಂದ ಹಾಗೆ ವರ್ತಿಸುತ್ತಾ ಹೋಗುತ್ತಾರೆ. ಇದರಿಂದ ಯಾರಿಗೆ ತೊಂದರೆಯಾದರೂ ಚಿಂತೆಯಿಲ್ಲ ನಮ್ಮ ಕೆಲಸವನ್ನು ನಾವು ಮಾಡೋಣ ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇರುವ ಹಾಗೆ ಕಾಣುತ್ತದೆ.

5-30 P.M.

ಅಲ್ಲದೆ ಇಂತಹ ಕಾಂಟ್ರಿಬ್ಯೂಷನ್‌ಗಳನ್ನು ನಿಗದಿ ಮಾಡುವಾಗ ಸಾಮಾನ್ಯವಾಗಿ ವಾಟರ್ ರೇಟ್ ಬೋರ್ಡ್ ಎನ್ನುವ ಒಂದು ಸಮಿತಿಯನ್ನು ನೇಮಿಸಿದರೆ, ಆಯಾ ಪ್ರದೇಶಗಳಲ್ಲಿರುವ ಜನಕ್ಕೆ ಎಷ್ಟು ದೂರ ಅನುಕೂಲವಾಗುತ್ತದೆ ಎಂತಹ ಕಡೆಗಳಲ್ಲಿ ಎಷ್ಟೆಷ್ಟು ಕಾಂಟ್ರಿಬ್ಯೂಷನ್ ವಿಧಿಸಬೇಕು ಎನ್ನುವುದನ್ನೆಲ್ಲಾ ಯೋಚಿಸಿ ಸರಿಯಾದ ರೀತಿಯಲ್ಲಿ ನಿಗದಿ ಮಾಡಲು ಅನುಕೂಲವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಈ ಬಿಲ್ಲನ್ನು ನಾನು ವಿರೋಧಿಸುತ್ತೇನೆ. ಇದರ ಬಗ್ಗೆ ಶ್ರೀ ದೇವರಾಜ ಅರಸ್ ರವರು ಇಲ್ಲಿ ಮಾತನಾಡಿದುದನ್ನು ಕೂಲಂಕಷವಾಗಿ ಕೇಳಿದೆ. ಆದರೆ ನಾನು ಅವರಿಗೆ ಉತ್ತರ ಕೊಡುತ್ತೇನೆಂದು ಭಾವಿಸಬಾರದು. ಅವರು ಮಾತನಾಡುತ್ತಾ ಕೆಲವು ಮೂಲಭೂತವಾದ ಅಂಶಗಳನ್ನು ಎತ್ತಿದರು. ಅವರು ಇಲ್ಲಿ ಡಿಸ್‌ಕಷನ್ ಮಾಡುತ್ತಾ ಕಾಂಗ್ರೆಸ್ ಪಕ್ಷದವರು ಏನೋ ಎಲ್ಲ ವಿಚಾರಗಳನ್ನೂ ಗಮನಕ್ಕೆ ತೆಗೆದುಕೊಂಡು ಜನತೆಗೆ ಅನುಕೂಲ ಮಾಡುತ್ತೇವೆ ಎಂದು ಹೇಳುತ್ತ ಇರುವುದರಿಂದಲೇ ಸ್ವಾತಂತ್ರ್ಯ ಬಂದಮೇಲೆ ನಮ್ಮ ದೇಶ ಇಂತಹ ಸ್ಥಿತಿಗೆ ಬಂದಿದೆ. ಬೆಟರುಮೆಂಟು ಲೆವಿ ಎಂದು ಇದರ ಚರಿತ್ರೆಯನ್ನು ನೋಡಿದರೆ ಬಹಳ ಚೆನ್ನಾಗಿ ನಮಗೇ ಗೊತ್ತಾಗುತ್ತದೆ. 1957ನೇ ಇಸವಿಯೊಳಗೆ ಮೊದಲು 200ನ್ನು ಹತ್ತು ಕಂತುಗಳಲ್ಲಿ ಕೊಡಬೇಕು ಎಂದು ಮೈಸೂರು ಇರಿಗೇಷನ್ ಆಕ್ಟ್ 1952 ನಲ್ಲಿ ಮಾಡಿದರು. ಇದಕ್ಕೆ ರಿಬೇಟು ಶೇಕಡಾ ಏಳರಷ್ಟು ಕೊಡಬೇಕು ಎಂದು 1957ರ ಆಕ್ಟ್‌ನಲ್ಲಿ ತಂದರು. ಈಗ ಇಲ್ಲಿ ಶೇಕಡಾ 50ರಷ್ಟು ಇರಬೇಕು ಎಂದು ತಂದು ಈ ಬಿಲ್ಲನ್ನು ಪಾಸುಮಾಡಬೇಕೆಂದು ಹೇಳುತ್ತಿದ್ದಾರೆ. ಮೊದಲು ಇದನ್ನು 500 ರೂಪಾಯಿ ಎಂದು ಮಾಡಿದ್ದರು. ಅದನ್ನು ಪುನಃ ಕಡಿಮೆ ಮಾಡಬೇಕು ಎಂದು 300 ರೂಪಾಯಿಗೆ ಕಮ್ಮಿ ಮಾಡಿದರು. ಈಗ ಮತ್ತೆ 300 ಇರುವುದು ಸರಿಯಲ್ಲ. ಎಂದು ಹೊಸದಾಗಿ ಈ ಕಾನೂನು ತಂದು ಶೇಕಡಾ 50ರಷ್ಟು ಹೆಚ್ಚು ಮಾಡಬೇಕು

(ಶ್ರೀ ಎಂ. ಎಸ್. ಕೃಷ್ಣನ್

ಎಂದು ಹೇಳಿ 300 ಇರುವುದನ್ನು 500 ರವರೆಗೆ ಜಾಸ್ತಿ ಮಾಡಬೇಕು ಎಂದು ಹೆಚ್ಚಿಸಿ ಈ ಬಿಲ್ಲನ್ನು ತಂದಿದ್ದಾರೆ. ಇದರಿಂದ ದೇಶದ ಜನತೆಗೆ ಸರಿಯಾದ ಒಂದು ವಿವರಣೆ ಕೊಟ್ಟಿಲ್ಲ ಎಂದು ಹೇಳಬೇಕಾಗಿದೆ. ಸರಕಾರದ ನಿಲುವು ಮೊದಲು ಸ್ಪಷ್ಟವಾಗಿರಲಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ, ಚುನಾವಣೆ ಬರುತ್ತದೆ ಎಂದು ಅದಕ್ಕೆ ಮೊದಲು ಈ ಲೆವಿಯನ್ನು 500ರಿಂದ 300ಕ್ಕೆ ಇಳಿಸುವಂತೆ ಮಾಡಿದಿರಿ. ಈಗ ಚುನಾವಣೆ ಮುಗಿದಿದೆ ಎಂದು ಮತ್ತೆ 300ರಿಂದ 500ರ ವರೆಗೆ ಏರಿಸುತ್ತಿದ್ದೀರಿ. ಇದಕ್ಕೆ ಇರುವ ಕಾರಣಗಳಾದರೂ ಏನು ಎಂದು ನಾನು ಇಲ್ಲಿ ಕೇಳಬಯಸುತ್ತೇನೆ. ಚುನಾವಣೆಯ ದೃಷ್ಟಿಯಿಂದ ಮೊದಲಿಗೆ 300 ಎಂದು ಮಾಡಿದಿರಿ. ಈಗ ಚುನಾವಣೆ ಬಹಳ ದೂರ ಇದೆ ಎಂದು ಮತ್ತೆ 300ರಿಂದ 500ರವರೆಗೆ ಏರಿಸುವಂತೆ ಈ ಬಿಲ್ಲನ್ನು ತಂದಿರುವುದು ತಪ್ಪು ಎಂದು ಹೇಳಬೇಕಾಗಿದೆ. ನಾನಾದರೂ ಬೆಟರುಮೆಂಟು ಲೆವಿ ಹಾಕಬಾರದು ಎನ್ನುವ ಮನುಷ್ಯನಲ್ಲ. ಇದರ ತತ್ವದಲ್ಲಿ ಭಿನ್ನಾಭಿಪ್ರಾಯ ವಿಲ್ಲ. ಇಲ್ಲಿ ಹೀಗೆ ರೇಟುಗಳನ್ನು ಹೆಚ್ಚು ಮಾಡುತ್ತಾ ಹೋದರೆ ಇದನ್ನು ಯಾರಮೇಲೆ ಹಾಕುತ್ತೀರಿ ಎನ್ನುವ ಮುಖ್ಯ ಪ್ರಶ್ನೆ ಇಲ್ಲಿ ಬರುತ್ತದೆ. ನಿಜವಾಗಿಯೂ 500 ರೂಪಾಯಿಗಳೆಂದು ನಿಗದಿ ಮಾಡಬೇಕಾದರೆ ಯಾವುದಾದರೂ ಸೈಂಟಿಫಿಕ್ ಆಧಾರದಮೇಲೆ ಅಥವಾ ಒಂದು ತತ್ವದ ಆಧಾರದ ಮೇಲೆ ನಿಗದಿ ಮಾಡಿದರೆ ಅದು ಸರಿಯಾಗಿರುತ್ತದೆ. ಇಲ್ಲಿ ಅಂತಹ ಸೈಂಟಿಫಿಕ್ ಆಧಾರಗಳು ಯಾವುದೂ ಇಲ್ಲ. ಆ ರೀತಿ ನಿಗದಿ ಮಾಡಿಲ್ಲ, ಮೈಸೂರು ರಾಜ್ಯದಲ್ಲಿ ಹಿಂದೆ ನಾಗನಗೌಡ ಕಮಿಟಿ ಎಂದು 1954ನೇ ಇಸವಿಯಲ್ಲೇ ಮಾಡಿದ್ದರು. ಅವರು ಆಗ 600 ರೂಪಾಯಿಗಳೆಂದು ನಿಗದಿ ಮಾಡಿದ್ದರು. ಆ ನಂತರ ಇದನ್ನು ಸರಕಾರ ಒಂದು ಗವರ್ನಮೆಂಟು ಆರ್ಡರ್ ಪ್ರಕಾರ 500 ರೂಪಾಯಿಗಳಿಗೆ ಇಳಿಸಿದ್ದರು. ಆಗ ಏಕೆ ಆ ರೀತಿ ಮಾಡಿದ್ದರು ಎನ್ನುವುದಕ್ಕೆ ಇದುವರೆಗೂ ಸ್ಪಷ್ಟವಾದ ಕಾರಣವನ್ನು ಇಲ್ಲಿ ಹೇಳಲಿಲ್ಲ ಯಾವ ಕಾರಣಗಳೂ ಇಲ್ಲದಿದ್ದರೆ ಇದನ್ನು ಏಕೆ ಮಾಡಬೇಕು ಎನ್ನುವುದನ್ನು ಇಲ್ಲಿ ಯೋಚನೆ ಮಾಡಬೇಕು. ಕಾರಣಗಳನ್ನು ಹೇಳದೆ ಇರುವುದರಿಂದ ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ ಇದು ಸರಿಯಾದ ಬಿಲ್ಲು ಅಲ್ಲ ಎಂದು. ಬಿಲ್ಲನ್ನು ಮಂಡಿಸುವಾಗ ಬೇರೆ ಬೇರೆ ರಾಜ್ಯಗಳಲ್ಲಿ ಹೇಗೆ ಮಾಡಿದ್ದಾರೆ ಎನ್ನುವುದಕ್ಕೆ ಎರಡು ಮೂರು ನಿದರ್ಶನಗಳನ್ನು ಹೇಳುತ್ತೇನೆ. 1953-54 ರಲ್ಲಿ ಭಾಕ್ರಾನಂಗಲ್ ಪ್ರಾಜೆಕ್ಟ್ ಆಯಿತು ಅದರಲ್ಲಿ :

> "For Perennial land commanded by the project Area the levy was one-fourth the increase in capital value and not 50 %."

ಅದು ಪಂಜಾಬಿನಲ್ಲಿದೆ. ಅಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಎಂದು ಲ್ಯಾಂಡ್ ರೆವೆನ್ಯೂ ಶೇಕಡ 25 ಇದದ್ದನ್ನು ಶೇಕಡಾ 50ಕ್ಕೆ ಜಾಸ್ತಿ ಮಾಡಬೇಕೆಂಬ ಪ್ರಶ್ನೆ ಬಂದಾಗ ಅಲ್ಲಿ ಯಾವ ಆಧಾರದಮೇಲೆ ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆ ಕೂಡ ನಡೆಯಿತು. ಆಗ ಅಲ್ಲಿನ ಪಂಜಾಬು ರೈತರೂ ಕೂಡ ದೊಡ್ಡದಾಗಿ ಚಳುವಳಿ ಕೂಡ ಹೂಡಿದ್ದರು. ಆಗಿನ ಕಾಲದಲ್ಲಿ ನಿಗದಿ ಮಾಡಿರುವ 180 ರೂಪಾಯಿಗಳೇ ಜಾಸ್ತಿ ಅದನ್ನು ಕಡಿಮೆ ಮಾಡಬೇಕು ಎಂದು ಹೇಳಿದ್ದರು. ಹಾಗೆ ಪಾರ್ಲಿಮೆಂಟಿನಲ್ಲಿ ಕೂಡ ಬಹಳ ಪ್ರಾಮುಖ್ಯವಾದ ಸದಸ್ಯರುಗಳು ಎಂದರೆ ಪಂಡಿತ ಠಾಕೂರುದಾಸ್ ಭಾರ್ಗವ. ಎಸ್. ಕೆ. ಪಾಟೀಲ್ ಅವರು ಅದರ ಬಗ್ಗೆ ಮಾತನಾಡುತ್ತ ಪಂಜಾಬು ಚಂದಿಗಡದಲ್ಲಿ ಹಾಕಿರುವುದು ಜಾಸ್ತಿ ಅದನ್ನು ಕಡಿಮೆ ಮಾಡಬೇಕು ಎಂದು ಹೇಳಿದ್ದಾರೆ. ಹಾಗೇ ಹಿರಾಕುಡ್ ಪ್ರಾಜೆಕ್ಟ್ ಮಾಡುವಾಗ ಯಾವ ರೀತಿ ಆಯಿತು ಎಂದರೆ ನನ್ನ ಹತ್ತಿರ ಇರತಕ್ಕ ಈ ಒಂದು ವರದಿಯಲ್ಲಿ (ಪುಟ 258ರಲ್ಲಿ) ಹೀಗಿದೆ :

> "Instalment payable as well as basic water rate should not exceed 50 per cent of the additional profit attributable to Irrigation".

ಮತ್ತು ಬೇರೆ ರಾಜ್ಯಗಳಲ್ಲಿ ಯಾವ ರೀತಿ ಬೆಟರುಮೆಂಟು ಲೆವಿ ಇದೆ, ಅದನ್ನು ಹೇಗೆ ನಿಗದಿ ಮಾಡಿದ್ದಾರೆ ಎನ್ನುವುದನ್ನು ನೋಡಿದರೆ, ಮದ್ರಾಸಿನಲ್ಲಿ :—

> "20 per cent Rebate is also given on the betterment levy given as advance payment."

ಹಾಗಿರುವಾಗ ಮೈಸೂರಿನಲ್ಲಿ 500 ರೂಪಾಯಿಗಳಷ್ಟು ಮಾಡಲು ಇಲ್ಲಿ ಏನು ಇನ್‌ಸೆಂಟೀವ್ ಕೊಡುತ್ತೀರಿ? ಇನ್ನೊಂದು ಪೀರಿಯಡ್ ಆಫ್ ರೀ ಪೇಮೆಂಟು ಎನ್ನುವುದರಲ್ಲಿ 20 ವರ್ಷಗಳಲ್ಲಿ

ಕೊಡಬೇಕು ಎನ್ನುವುದನ್ನು 30 ವರ್ಷಗಳಲ್ಲಿ ಕೊಡಬೇಕು ಎಂದೇಕೆ ಮಾಡಬಾರದು? ಬೇರೆ ರಾಜ್ಯಗಳಲ್ಲಿ 30 ವರ್ಷಗಳಿವೆ. ಇಲ್ಲಿ 300 ಇದ್ದುದ್ದನ್ನು 500 ರೂಪಾಯಿಗಳವರೆಗೆ ಏಕೆ ಜಾಸ್ತಿ ಮಾಡಬೇಕು ಎನ್ನುವುದರಲ್ಲಿ ಯಾವ ತತ್ವವೂ ಅಡಕವಾಗಿಲ್ಲ. ಇನ್ನೊಂದು ಕಾರಣ ಇಲ್ಲಿ ಹೇಳಬೇಕಾಗಿದೆ. ಲ್ಯಾಂಡ್ ರೆವಿನ್ಯೂವಿನಿಂದ ಜಾಸ್ತಿ ಬರುವುದನ್ನು ಇರಿಗೇಷನ್ ವರ್ಕ್ಸ್‌ಗಳಿಗೆ ತೆಗೆದುಕೊಳ್ಳಬೇಕು ಎಂದು ಹೇಳಬಹುದು. ನಾನಾದರೂ ಹೇಳುವುದು ಇಷ್ಟೇ. ಈಗ ಲ್ಯಾಂಡ್ ವ್ಯಾಲ್ಯೂ ಜಾಸ್ತಿಯಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ನೀರಾವರಿಗಾಗಿ ನೀರನ್ನು ತೆಗೆದುಕೊಳ್ಳುವಾಗ ಶೇಕಡಾ ಹತ್ತರಷ್ಟು ಜಾಸ್ತಿಯಾಗಿ ಏಕೆ ಕೊಡಬಾರದು ಎನ್ನುವ ಒಂದು ವಾದ ಮಾಡುತ್ತಾರೆ. ಯಾರ ಯಾರಲ್ಲಿ ಎಷ್ಟು ಎಕರೆಗಳಷ್ಟು ಭೂಮಿ ಇದೆ ಎನ್ನುವ ಲೆಕ್ಕಗಳನ್ನಾದರೂ ನೋಡಿದ್ದಾರೆಯೇ? 20 ಎಕರೆಯಿಂದ 500 ಎಕರೆಗಳಷ್ಟು ಇರುವವರಿಗೆ ಶಕ್ತಿ ಇರುತ್ತದೆ, ಕೊಡಬಹುದು. ಆದರೆ ಸಣ್ಣ ಹಿಡುವಳಿದಾರರು ಎಂದರೆ ಐದು ಎಕರೆಗಳಿಗಿಂತಲೂ ಕಡಿಮೆ ಭೂಮಿ ಇರುವವರು ಕೊಡುವುದಕ್ಕೆ ಶಕ್ತಿ ಇರುತ್ತದೆಯೇ, ಎನ್ನುವುದನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕು. ರೈತನಿಗೆ ಕಂದಾಯ ಕೊಡುವ ಶಕ್ತಿಯೇ ಇಲ್ಲ. ಹೀಗಿರುವಾಗ ಅವನಿಗೆ ಈ ಹೆಚ್ಚುವರಿ ಲೆವಿ ಕೊಡುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ಸರಿಯಾಗಿ ಪರಿಶೀಲನೆ ಮಾಡಬೇಕು. ಈ ದಿವಸ ರೈತನಲ್ಲಿ ಕೊಳ್ಳುವ ಶಕ್ತಿ ಹೇಗೆ ಕಡಿಮೆಯಾಗಿದೆ ಎಂಬುದಕ್ಕೆ ಹೇಳುತ್ತೇನೆ—1948ರಲ್ಲಿ ಅವನಲ್ಲಿ ಕೊಳ್ಳತಕ್ಕ ಶಕ್ತಿ 100 ಭಾಗ ಇತ್ತು, ಅದು 1954ಕ್ಕೆ 84ಕ್ಕೆ ಇಳಿಯಿತು ಮತ್ತೆ 1955ರಲ್ಲಿ ಅದು 70 ಇಳಿದಿದೆ. ಈ ದಿವಸ ಅದಿನ್ನೂ ಕಡಿಮೆಯಾಗಿದೆ. ಇದನ್ನು ನೋಡಿದರೆ ಏನು ಅರ್ಥ ಬರುತ್ತದೆ? ಸರ್ಕಾರದವರು ರೈತನಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದರೂ ಆತನು ದಿನವಹಿ ಕೊಳ್ಳಬೇಕಾಗಿರತಕ್ಕ ವಸ್ತುಗಳ ಬೆಲೆ ದಿನ ದಿನಕ್ಕೂ ಏರುತ್ತಿವೆ. ಹೀಗಾಗಿ ಅವನಲ್ಲಿ ಈ ದಿವಸ ಕೊಳ್ಳತಕ್ಕ ಶಕ್ತಿ ಬಹಳ ಕಡಿಮೆಯಾಗಿದೆ. ಹೀಗಿರುವಾಗ ಆತನಮೇಲೆ ಈ ದಿವಸ ನೀವು 500 ರೂಪಾಯಿಗಳ ತೆರಿಗೆಯನ್ನು ಹಾಕಿದರೆ ಎಲ್ಲಿಂದ ತಂದು ಕೊಡಬೇಕು? ಆದ್ದರಿಂದ ನಾನು ಹೇಳುತ್ತಿರುವುದಿಷ್ಟೆ: ಈ ತೆರಿಗೆಯ ಪರಿಮಿತಿಯಲ್ಲಿ ಬರತಕ್ಕ ಭೂ ಮಾಲೀಕರು ಅವರು ಯಾರೇ ಆಗಲಿ 5 ಎಕರೆ ಭೂಮಿಗಿಂತ ಕಡಿಮೆ ಭೂಮಿ ಇರತಕ್ಕವರಿಗೆ ಈ ತೆರಿಗೆಯನ್ನು ವಿಧಿಸಬಾರದು ಅವರಿಗೆ ವಿನಾಯಿತಿ ಕೊಡಬೇಕು ಎಂದು ಹೇಳುತ್ತೇನೆ. ನಾನು ತಿದ್ದುಪಡಿಯನ್ನೂ ಕೂಡ ಕಳುಹಿದ್ದೇನೆ. ಇದೇ ವಿಚಾರದಲ್ಲಿ ಹೆಚ್ಚಿಗೆ ಅಧ್ಯಯನ ಮಾಡಿರತಕ್ಕ ಆಂಧ್ರದ ಶ್ರೀಮಾನ್ ಸಿ. ಎಚ್. ಹನುಮಂತರಾವ್ ಎಂಬತಕ್ಕವರು ಈ ಟಾಕ್ಸನ್ನು ಕೊಡತಕ್ಕ ಜನರಲ್ಲಿ ಅರ್ಬನ್ ಪಾಪುಲೇಷನ್ ಅವರು ಜಾಸ್ತಿ ಟ್ಯಾಕ್ಸನ್ನು ಕೊಡುತ್ತಾರೆಯೇ ಅಥವಾ ರೂರಲ್ ಪಾಪುಲೇಷನ್ ಅವರು ಜಾಸ್ತಿ ಟ್ಯಾಕ್ಸನ್ನು ಕೊಡುತ್ತಾರೆಯೇ ಎಂಬುದನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ರೂರಲ್ ಪಾಪುಲೇಷನ್ನೇ ಟ್ಯಾಕ್ಸನ್ನು ಹೆಚ್ಚಿಗೆ ಕೊಡುತ್ತಿದೆಯೆಂದೂ ಮತ್ತು ಅವರಿಗೆ ನಗರಗಳಲ್ಲಿ ವಾಸಮಾಡತಕ್ಕ ಜನಕ್ಕೆ ದೊರೆಯತಕ್ಕ ಅನೇಕ ಸೌಲಭ್ಯ ಕೂಡ ದೊರೆಯುತ್ತಿಲ್ಲ ಎಂಬುದಾಗಿ ಒಂದು ದೊಡ್ಡ ಪುಸ್ತಕವನ್ನೇ ಬರೆದಿದ್ದಾರೆ. ಆದ್ದರಿಂದ ಈ ತೆರಿಗೆ ಬಹಳ ಜಾಸ್ತಿ ಆಯಿತು. ಇದನ್ನು ಎಲ್ಲರಿಗೂ ಮನ್ನಾ ಮಾಡದೆ ಇದ್ದರೂ ಕನಿಷ್ಟ 5 ಎಕರೆ ಭೂಮಿ ಇರತಕ್ಕವರಿಗಾದರೂ ಇದನ್ನು ಹಾಕಬಾರದು ಎಂದು ಹೇಳುತ್ತೇನೆ.

† ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಅಧ್ಯಕ್ಷರೇ: ಈಗ ಸಭೆಯ ಮುಂದಿರತಕ್ಕ ವಾಟರ್ ಲೆವಿ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಹಾಗೆ ಸ್ವಾಗತಿಸುವಾಗ ಒಂದೆರಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಸರ್ಕಾರದವರು 300 ರೂಪಾಯಿಗಳಿದ್ದ ವಾಟರ್ ರೇಟನ್ನು ಈಗ 500 ರೂಪಾಯಿಗಳಿಗೆ ಹೆಚ್ಚಿಸಬೇಕೆಂಬುದನ್ನು ನಾನು ತತ್ವಶಃ ಒಪ್ಪುತ್ತೇನೆ. ಆದರೆ ಇದನ್ನು ವಸೂಲ್ಮಾಡುವ ಕಾಲಕ್ಕೆ ಸರ್ಕಾರದವರು ಕೆಲವು ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಸರ್ಕಾರದವರು ರಾಜ್ಯದಲ್ಲ ಯಾವುದೇ ಒಂದು ಪ್ರದೇಶವನ್ನು ನೀರಾವರಿ ಪ್ರದೇಶ ಎಂದು ಸಾರಿದಮೇಲೆ ಅಲ್ಲಿ ಈ ಟ್ಯಾಕ್ಸನ್ನು ವಸೂಲ್ಮಾಡಬೇಕೇ ವಿನಾ ಅದಕ್ಕೆ ಮೊದಲು ವಸೂಲ್ಮಾಡಬಾರದು ಅನ್ನುವುದು ಒಂದು. ಇನ್ನು ಎರಡನೆಯದಾಗಿ ಆ ನೋಟಿಫೈಡ್ ಏರಿಯಾದಲ್ಲಿ ಪ್ರತಿಯೊಬ್ಬನ ಭೂಮಿಗೂ ನೀರು ಹೋಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ನೋಡಬೇಕು ಅನಂತರ ಮೂರನೆಯದಾಗಿ ನೀರು ಹೋಗತಕ್ಕ ಜಮೀನುಗಳಿಗೆ ಮಾತ್ರ ಈ ತೆರಿಗೆಯನ್ನು ಹಾಕತಕ್ಕದ್ದು. ಇದಕ್ಕೆ ಕಾರಣ ಏನೆಂದರೆ ಈ ದಿವಸ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಘಟಪ್ರಭಾ ಯೋಜನೆಯ ಕೆಳಗೆ 600—800 ಎಕರೆ ನೀರಾವರಿಯಾಗಿದೆ ಎಂಬುದಾಗಿ ಜಾಹಿರಾತು ಮಾಡಿದ್ದಾರೆ. ಆದರೆ ಅಲ್ಲಿ 300 ಎಕರೆಗೂ ಸಹಾ ಸರಿಯಾಗಿ ನೀರು ಬರುತ್ತಿಲ್ಲ. ಈ ಅನ್ಯಾಯಕ್ಕಾಗಿ ಅಲ್ಲಿಯ ಜನರು ಬಹಳ ಪೇಚಿನಲ್ಲಿ ಸಿಕ್ಕಿಬಿದ್ದಿದ್ದಾರೆ. ಇಂಥಾ ಸಂದರ್ಭಗಳಲ್ಲಿ ಯಾವ ಅಧಿಕಾರಿಯಾಗಲಿ ಅನ್ಯಾಯಕ್ಕೆ ಕೈ ಹಾಕದಂತೆ

(ಶ್ರೀ ಬಿ. ಎಂ. ಶಾಣಿಕೊಪ್ಪ)

ನೋಡಿಕೊಳ್ಳಬೇಕು. ಇನ್ನು ಕೆಲವು ಕಡೆ ಮಧ್ಯಮ ವರ್ಗದ ನೀರಾವರಿ ಸೌಲಭ್ಯಗಳನ್ನು ಪಡೆದಿರತಕ್ಕ ಜಮೀನುಗಳಿಗೂ 400—500 ರೂಪಾಯಿಗಳ ಟ್ಯಾಕ್ಸ್ ಹಾಕಿದ್ದಾರೆ. ಆದರೆ ಅಲ್ಲಿ ಪಾಳೇನೇ ಬಂದಿಲ್ಲ. ಕೆರೆಗಳಲ್ಲಿ ನೀರೂ ಇಲ್ಲ. ಆದಾಗ್ಯೂ ಬೆಟರ್‌ಮೆಂಟ್ ಫೀ ಮಾತ್ರ ವಸೂಲಾಗುತ್ತಿದೆ. ಸರ್ಕಾರದವರು ಇದಕ್ಕೆ ಲಕ್ಷ್ಯಕೊಟ್ಟು ಇದನ್ನು ಕೂಡಲೇ ಸರಿಪಡಿಸಬೇಕು. ಇಂಥ ಸಂದರ್ಭಗಳಲ್ಲಿ ಬೆಟರ್‌ಮೆಂಟ್ ಫೀಜನ್ನು ತೆಗೆದುಕೊಳ್ಳಬಾರದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸ್ವಾಮಿ, ನಾನು ಈ ಬೆಟರ್‌ಮೆಂಟ್ ಲೆವಿ ಬಿಲ್ಲನ್ನು ಬಹಳವಾಗಿ ವಿರೋಧಿಸುತ್ತೇನೆ. ಸರ್ಕಾರದವರು ಏತಕ್ಕಾಗಿ ಈ ತಿದ್ದುಪಡಿಯನ್ನು ತಂದಿದ್ದಾರೆ ಎಂಬ ಬಗ್ಗೆ ಈಗಾಗಲೇ ನನ್ನ ಅನೇಕ ಮಾನ್ಯ ಮಿತ್ರರು ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಆದರೆ ಈ ದಿವಸ ನಾವು ಇಲ್ಲಿ ಪರಿಶೀಲನೆ ಮಾಡಬೇಕಾದ್ದು 500 ರೂಪಾಯಿ ತೆರಿಗೆಯನ್ನು ಕೊಡಬೇಕೇ ಅಥವಾ 300 ರೂಪಾಯಿಗಳ ತೆರಿಗೆಯನ್ನು ಕೊಡಬೇಕೇ ಎಂಬುದು ಅಷ್ಟು ಮುಖ್ಯದ ಪ್ರಶ್ನೆಯಲ್ಲ, ಇಲ್ಲಿ ಒಂದು ತತ್ವದ ಪ್ರಶ್ನೆಯನ್ನು ನಾವು ಎತ್ತಿಹಿಡಿಯಬೇಕಾಗಿದೆ. ಸರ್ಕಾರದವರು ಹೀಗೆ ಪ್ರತಿಯೊಂದಕ್ಕೂ ರೈತರಿಂದ ದುಡ್ಡನ್ನು ಸೆಳೆಯುತಕ್ಕದ್ದು ಸರ್ವಥಾ ಸರಿಯಾದ್ದಲ್ಲ—ನ್ಯಾಯವೂ ಅದ್ದಲ್ಲ. ರೈತನ ಮೈಲಿರತಕ್ಕ ಒಂದೊಂದು ರೋಮಕ್ಕೂ ಸರ್ಕಾರದವರು ಟ್ಯಾಕ್ಸನ್ನು ವಸೂಲ್ಮಾಡುತ್ತಿದ್ದಾರೆ. ಇನ್ನು ಸರ್ಕಾರದವರು ಈ ಟ್ಯಾಕ್ಸನ್ನು ಹಾಕದೆ ಇರತಕ್ಕ ಯಾವ ಜನರ ಸಲುವಾಗಿ ಈ ಹಣವನ್ನು ಖರ್ಚುಮಾಡುತ್ತಾರೆ ಎಂದು ನಾನು ಅವರನ್ನು ಕೇಳಬೇಕಾಗಿದೆ? ಆ ಬ್ರಿಟಿಷರಿದ್ದ ಕಾಲದಲ್ಲಿ ಸಹಿತ ಅವರು ಟ್ಯಾಕ್ಸನ್ನು ಹಾಕದಂತೆ ಎಷ್ಟೋ ಕೆಲಸಗಳನ್ನು ಮಾಡಿಸಿದರು. ಹಿಂದಿನ ರಾಜಮಹಾರಾಜರುಗಳು ಜನರಿಂದ ಟ್ಯಾಕ್ಸನ್ನು ವಸೂಲ್ಮಾಡದೆ ಅನೇಕ ಕೆರೆಕಟ್ಟೆಗಳನ್ನು ಕಟ್ಟಿದ್ದಾರೆ. ಅದನ್ನು ಈ ದಿವಸ ಆಡಳಿತ ನಡೆಸತಕ್ಕ ಜನರು ತಮ್ಮ ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕು. ಒಂದಾವರ್ತಿ ಒಬ್ಬ ಹುಡುಗ ತನ್ನ ತಂದೆಯ ಹತ್ತಿರ ಹೋಗಿ—ಅಪ್ಪಾ, ನಾನು ಜಾತ್ರೆಗೆ ಹೋಗಬೇಕು ಅಂತ ಆಸೆಯಾಗಿದೆ; ನೀ ಹೋಗೂ ಅಂದರೂ ನಾ ಹೋಗ್ತೇನೆ, ನೀ ಬ್ಯಾಡಾ ಅಂದ್ರೂ ನಾ ಹೋಗ್ತೇನೆ ಇದಕ್ಕೆ ನೀ ಏನಂತಿ ಎಂದು ಕೇಳಿದನಂತೆ. ಈ ಒಂದು ಸಂದರ್ಭ ಕೂಡ ಹಾಗೇ ಇದೆ. ಸರ್ಕಾರದವರು ತಮ್ಮ ವಿವೇಕವನ್ನೇ ಕೈಬಿಟ್ಟು ನಮಗೆ ಪಾರ್ಟಿಯ ಬಲವಿದೆ ಎಂದೂ, ವಿರೋಧಪಕ್ಷದವರನ್ನು ನಾವು ಕೇಳುವಂತೆ ಕೇಳೋಣ—ಅವರೂ ಹೇಗೂ ಒಪ್ಪುವುದಿಲ್ಲ ಆಗ ನಾವೂ ಹೇಗೂ ಇದನ್ನು ಪಾಸ್ ಮಾಡಿಸಿಕೊಳ್ಳಲು ಅವಕಾಶವಿದೆ ಎಂದು ಮಾಡುತ್ತಿರುವುದು ಸರ್ವಥಾ ಸರಿಯಾದ್ದಲ್ಲ. ಈ ಬಿಲ್ಲನ್ನು ಸರ್ಕಾರದವರು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಸರ್ಕಾರದವರೇ ಒಪ್ಪಿರುವ ಪ್ರಕಾರ ನಮ್ಮ ರಾಜ್ಯದ ಅನೇಕ ಭಾಗದಲ್ಲಿ ಬಹು ಭಾಗದಲ್ಲಿ ಎಕರೆ ಒಂದಕ್ಕೆ ಎರಡು—ಒಂದು ರೂಪಾಯಿ ಕಂದಾಯವಿದೆ. ಅಂಥ ಭೂಮಿಯ ಕಿಮ್ಮತ್ತನ್ನು ನಿರ್ಧರ ಮಾಡುವಾಗ ಆ ಭೂಮಿ ಕಂದಾಯದ 200 ಪಟ್ಟು ಹಾಕಿದರೆ ಅದರ ಬೆಲೆಯಾಗುತ್ತೆಂದು ತೀರ್ಮಾನ ಮಾಡಿದ್ದಾರೆ. ಅಂದಾಗ ಆ 200 ಅಥವ 400 ರೂಪಾಯಿಗಳ ಕಿಮ್ಮತ್ತಿನ ಭೂಮಿಗಳಿಗೆ ಸರ್ಕಾರದವರು 500 ರೂಪಾಯಿಗಳನ್ನು ಟ್ಯಾಕ್ಸ್ ಹಾಕಿದರೆ ಅವರೆಲ್ಲಿಂದ ತಂದು ಕೊಡಬೇಕು? ಸಾಲಮಾಡಿ ಕೊಡಲಿ ಅಂದರೆ ಅದಕ್ಕೂ ಸಹಿತ ಸರ್ಕಾರದವರು ಬ್ಯಾಂಕುಗಳಿಗೂ ಮತ್ತು ಸೊಸೈಟಿಗಳಿಗೂ ಜಮೀನಿನ ಬೆಲೆಯ ಶೆ: 25, 30 ಅಥವಾ 40 ಜಾಸ್ತಿಯಾಗಿ ಯಾರಿಗೂ ಸಾಲ ಕೊಡಬಾರದು ಎಂದು ನಿರ್ಬಂಧ ಬೇರೆ ವಿಧಿಸಿದ್ದಾರೆ. ಆದ್ದರಿಂದ ಸಾಲ ಮಾಡಿ ಕೊಡುವುದಕ್ಕೂ ಸಾಧ್ಯವಿಲ್ಲ. ಇನ್ನು ಆ ಜಮೀನನ್ನು ಆ ರೈತ ಹರಾಜ್ ಹಾಕಿ ಸರ್ಕಾರಕ್ಕೆ ಟ್ಯಾಕ್ಸನ್ನು ಕೊಡಬೇಕು. ಇಲ್ಲವೇ ಅತನು ತನ್ನ ಮನೇಲಿ ಏನಾದರೂ ಹಣವನ್ನು ಹೂತಿಟ್ಟಿದ್ದಾನೆಯೇ? ಅಂದರೆ ಅದೂ ಸಹಿತಾ ಇಲ್ಲ. ಹಾಗೆ ಅವನಲ್ಲಿ ರೊಕ್ಕ ಇದ್ದಿದ್ದರೆ ಸರ್ಕಾರಕ್ಕೆ ಆತನು ಏಕೆ ಪ್ರತಿಯೊಂದು ಬಾಬಿಗೂ ಒಂದು ಟ್ರಾಕ್ಟರಿಗಾಗಲಿ, ಒಂದು ಪಂಪ್‌ಸೆಟ್ಟಿಗಾಗಲಿ ಏಕೆ ಕೈಚಾಚಬೇಕಾಗಿತ್ತು? ಅಷ್ಟೇ ಅಲ್ಲ ಸರ್ಕಾರದವರು ಶೇ: 25 ರಷ್ಟು ಹಣವನ್ನಾದರೂ ಮುಂಗಡವಾಗಿ ಕೊಡಬೇಕೆಂದಾಗ ಅದನ್ನೂ ಕೊಡಲಾರದೆ ಆ ಸಂದರ್ಭಗಳನ್ನು ಹಣವಂತರ ಪಾಲು ಮಾಡಿದ್ದಾರೆ. ಸರ್ಕಾರದವರು ಈ ದಿವಸ ಒಂದು ಹೊಸ ಕೆರೆಯನ್ನು ಕಟ್ಟಿದರೆ ಅದರ ಅಚ್ಚುಕಟ್ಟಿನಲ್ಲಿರತಕ್ಕ ಜಮೀನುಗಳ ಬೆಲೆ ಜಾಸ್ತಿ ಆಗಬಹುದು. ಆದರೆ ಅದರಿಂದ ದೇಶಾದ್ಯಂತವೂ ಭೂಮಿ ಬೆಲೆ ಏರುತ್ತದೆಂಬ ವಾದ ಸರಿಯಾದ್ದಲ್ಲ. ಈ ದಿವಸ ಬೆಂಗಳೂರು ನಗರಕ್ಕೆ ಬಹಳ ಹಣವನ್ನು ಖರ್ಚು ಮಾಡಿದ್ದೇವೆ, ಅದರಿಂದ ಬೆಂಗಳೂರಿನಲ್ಲಿ ಇರತಕ್ಕ ಆಸ್ತಿಗಳ ಬೆಲೆ ಜಾಸ್ತಿ ಆಯಿತು. ಅದರಲ್ಲಿ ಒಂದು ಹಿಸ್ಸೆಯನ್ನು ಸರ್ಕಾರಕ್ಕೆ ಕೊಡಿ ಎಂದರೆ ಅವರು ಕೊಡುತ್ತಾರೆಯೇ? ಅಥವಾ ಸರ್ಕಾರದವರು ಫ್ಯಾಮಿಲಿ ಪ್ಲಾನಿಂಗನ್ನು ಜಾರಿಗೆ ತಂದ ದೆಶೆಯಿಂದ 4 ಮಕ್ಕಳಾಗತಕ್ಕ ಮನೆಯಲ್ಲಿ ಇಬ್ಬರೇ

ಮಕ್ಕಳಾದರು. ಆದ್ದರಿಂದ ಆ ಮನೇಲಿ ಆಸ್ತಿಯನ್ನು 4 ವಿಭಾಗಮಾಡುವುದು ತಪ್ಪಿ ಎರಡು ಭಾಗ ಆಗುವುದರಿಂದ ಎರಡು ಭಾಗದ ಸ್ವತ್ತು ಉಳಿಯಿತು, ಅದರಿಂದ ಸರ್ಕಾರಕ್ಕೆ ಒಂದು ಹಿಸ್ಸೆಯನ್ನು ಕೊಡಬೇಕು ಎಂದರೆ ಸಾಧ್ಯವೇ? ಅಥವಾ ಹಾಗೆ ಕೇಳತಕ್ಕದ್ದು ನ್ಯಾಯವೇ? ಯಾವತ್ತು ಈ ಟ್ಯಾಕ್ಸನ್ನು 500 ರಿಂದ 300ಕ್ಕೆ ಇಳಿಸಲಾಯಿತೋ ಅದೇ ದಿವಸದಿಂದ 500 ರೂಪಾಯಿಗೆ ಏರಿಸಲಾಯಿತು ಎಂದು ತಿಪ್ಪಸಡಿ ಮಾಡುವುದು ಶುದ್ಧ, ಅನ್ಯಾಯ. ಒಂದು ವೇಳೆ ಸರ್ಕಾರದವರು 300 ರೂಪಾಯಿಗಳ ಪ್ರಕಾರ ಟ್ಯಾಕ್ಸ್ ವಸೂಲ್ಮಾಡಿದೆವು ಅದು ಸಾಲದೆ ಬಂದುದರಿಂದ ಈಗ ಇದನ್ನು 500 ಕ್ಕೆ ಹೆಚ್ಚಿಸಿದ್ದೇವೆ ಎಂಬ ವಾದವನ್ನೇನಾದರೂ ಅವರು ಸಭೆಯ ಮುಂದೆ ಇಟ್ಟಿದ್ದಾರೆಯೋ ಅಂದರೆ ಅದಿಲ್ಲ. 300 ರೂಪಾಯಿ ಏಕೆ ಮಾಡಿದಿರಿ? ಅದು ಗೊತ್ತಿಲ್ಲ. 500 ರೂಪಾಯಿ ಏಕೆ ಮಾಡಿದಿರಿ? ಅದು ಗೊತ್ತಿಲ್ಲ. ನಮ್ಮ ಸ್ನೇಹಿತರಾದ ಕೃಷ್ಣನ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ, ಚುನಾವಣೆ ಹತ್ತಿರ ಹತ್ತಿರ ಬಂದಾಗ, ಜನರ ಹತ್ತಿರ ಹೋಗುವಾಗ 500 ರೂಪಾಯಿ ಇದ್ದುದನ್ನು 300 ರೂಪಾಯಿ ಮಾಡಿದ್ದೇವೆ ಎಂದು ಹೇಳಿ ಅವರಲ್ಲಿ ವಿಶ್ವಾಸ ಹುಟ್ಟಿಸಿ ಚುನಾಯಿತರಾಗಿ ಬಂದು, ಅಧಿಕಾರಕ್ಕೆ ಬಂದಮೇಲೆ ಮೋಸಗಾರರಂತೆ ವರ್ತಿಸಿ ಇವತ್ತಿನ ದಿವಸ 500 ರೂಪಾಯಿ ಮಾಡುವುದಕ್ಕೆ ಹೊರಟಿರುವುದು ಸರ್ವಥಾ ಸರಿಯಾದ ಮಾರ್ಗವಲ್ಲ. ಈ ಸರ್ಕಾರಕ್ಕೆ ಎಷ್ಟು ಹಣ ಕೊಟ್ಟರೂ ಸಾಲದು, ನಿಮ್ಮ ಹಡಗಿನಲ್ಲಿ ತೂತು ಬಿದ್ದು ಹೋಗಿದೆ, ಅದನ್ನು ಯಾವುದರಿಂದಲೂ ಕೂಡ ಮುಚ್ಚಲಿಕ್ಕೆ ನಿಮ್ಮಿಂದ ಸಾಧ್ಯವಿಲ್ಲ, ಅಂತಹ ಪರಿಸ್ಥಿತಿಯಲ್ಲಿ ನೀವು ಇದ್ದೀರಿ. ಇದನ್ನೆಲ್ಲಾ ಯೋಚನೆ ಮಾಡಿ ಮುಳುಗುತ್ತಿರುವಂತಹ ನಿಮ್ಮ ಹಡಗನ್ನು ರಕ್ಷಣೆ ಮಾಡಿಕೊಳ್ಳಿ. ರೈತರನ್ನು ವಂಚಿತರನ್ನಾಗಿ ಮಾಡಬೇಡಿ, ಅವರನ್ನು ಈ ತೆರಿಗೆಯಿಂದ ಮುಕ್ತರನ್ನಾಗಿ ಮಾಡಿ ಎಂದು ಹೇಳಿ ಈ ಮಸೂದೆಯನ್ನು ಬಲವಾಗಿ ವಿರೋಧಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಮೈಸೂರು ಇರಿಗೇಷನ್ ಲೆವಿ ಆಫ್ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಅಂಡ್ ವಾಟರ್ ರೇಟ್ ಮಸೂದೆಯ ಬಗ್ಗೆ ಈಗಾಗಲೇ ಅಭಿಪ್ರಾಯಗಳನ್ನು ಕೊಟ್ಟು ಮಾನ್ಯ ಸದಸ್ಯರನೇಕರು ವಿರೋಧಿಸಿದ್ದಾರೆ. ಶ್ರೀಮಾನ್ ಸಾಣಿಕೊಪ್ಪ ಅಂಥವರು ಹೇಳಿದ್ದನ್ನು ವಿರೋಧ ಅಂತಲೂ ತಿಳಿದುಕೊಳ್ಳಬಹುದು, ಪರ ಅಂತಲೂ ತಿಳಿದುಕೊಳ್ಳಬಹುದು, ಮೊದಲು ವಾಕ್ಯ ಸ್ವಾಗತ ಮಾಡುವುದು, ಮುಂದೆಲ್ಲಾ ವಿರೋಧ. ಈ ರೀತಿ ಶ್ರೀಮಾನ್ ಪಾಟೀಲ್‌ರವರು ಹೇಳಿದ ಹಾಗೆ ಅವರಿಗೆ ವಿರೋಧ ಮಾಡುವುದಕ್ಕೆ ಮನಸ್ಸು ಇದ್ದರೂ ವಿರೋಧ ಮಾಡುವುದು ಮಂತ್ರಿಮಂಡಲದ ತೀರ್ಮಾನಕ್ಕೆ ವಿರೋಧವಾಗುತ್ತದೆ, ವೀರೇಂದ್ರ ಪಾಟೀಲ್‌ರವರಿಗೆ ಬೇಜಾರು ಆಗುತ್ತದೆ ಮತ್ತು ಪಕ್ಷದ ಶಿಸ್ತಿಗೆ ಸರಿಯಾದ್ದಲ್ಲ ಎಂಬ ಕಾರಣಕ್ಕಾಗಿ ಈ ಮಸೂದೆಯನ್ನು ಬೆಂಬಲಿಸುತ್ತಾ ಇದ್ದಾರೆ. ಇದರಲ್ಲಿ 300 ರೂಪಾಯಿನಿಂದ 500 ರೂಪಾಯಿ ಮಾಡುವುದಕ್ಕೆ ಬಲವತ್ತರವಾದ ಕಾರಣಗಳೇನು ಎಂಬುವನ್ನು ಕೊಟ್ಟಿಲ್ಲ. ಎರಡನೆಯದಾಗಿ ಹಾಕಿರತಕ್ಕ 300 ರೂಪಾಯಿಗಳನ್ನಾದರೂ ರೈತರು ಕೊಡುವುದಕ್ಕೆ ಮುಂಚೆ ಬಂದಿದ್ದಾರೆಯೇ? ಅವರಿಗೆ ಕೊಡುವಂತಹ ಶಕ್ತಿ ಇದೆಯೇ? ಈ ಪ್ರಶ್ನೆಯನ್ನು ವಿಚಾರ ಮಾಡಬೇಕು. ಇದುವರೆಗೂ ಏನು ರಿಪೋರ್ಟ್ ಬಂದಿದೆಯೋ, ಶ್ರೀಮಾನ್ ನಾಗನಗೌಡರ ಸಮಿತಿಯವರು 500 ರೂಪಾಯಿ ಮಾಡುವುದಕ್ಕೆ ಏನು ವಿಚಾರಗಳನ್ನು ಇಟ್ಟಿದ್ದಾರೋ ಅದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇದರಲ್ಲಿ ಮೂಲಭೂತವಾದ ಅನೇಕ ಅಭಿಪ್ರಾಯಗಳು ಇವೆ. ನನ್ನ ಅಭಿಪ್ರಾಯದಲ್ಲಿ ಅಥವಾ ನಾವು ಏನೊಂದು ಅಭಿಪ್ರಾಯವನ್ನು ಹೊಂದಿದ್ದೇವೆ ಎಂದರೆ ಎಲ್ಲಾ ಭೂಮಿಯ ಮೇಲೆ ಹಳೇ ಪದ್ಧತಿಯ ಈ ಕಂದಾಯವೇ ಇರಬಾರದು ಎಂದು ಹೇಳುತ್ತೇವೆ. ಆದರೆ ಕೆಲವರು ಇವತ್ತು ಏನು ಕಡಿಮೆ ಕಂದಾಯ ಕೊಟ್ಟು ಒಳ್ಳೆಯ ಉತ್ಪನ್ನ ಪಡೆಯುತ್ತಾರೆ ಅವರಿಗೆ ಏನಾದರೂ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕಿಬಿಟ್ಟರೆ ನಾವು ಒಂದಕ್ಕೆ ನೂರು ಕೊಡಬೇಕಾಗುತ್ತದೆ, ಹತ್ತು ಸಾವಿರ ರೂಪಾಯಿ ಕೃಷಿಯಿಂದ ಆದಾಯ ಪಡೆಯುವವರು ಒಂದು ಸಾವಿರ ರೂಪಾಯಿ ಕೊಡಬೇಕಾಗುತ್ತದೆ ಎಂಬ ಭಯದಿಂದ ಅವರು ಏನು ಮಾಡುತ್ತಾರೆ ಇದು ಎಲ್ಲಾ ರೈತರ ಮೇಲೆ ಹಂಚಿ ಹೋಗಲಿ, ನಾಲ್ಕು ಕೋಟಿ ರೂಪಾಯಿ ಎಲ್ಲಾ ರೈತರು ಕೊಡಲಿ ಒಂದು ಎಕರೆ ಇರುವವನು, ಎಂಟು ಗುಂಟೆ ಇರುವವನು, ಬೆಳೆ ಆಗಲಿ ಆಗದೇ ಇರಲಿ ಹುಲ್ಲಾದರೂ ಮಾರಲಿ, ಹರಾಜಾದರೂ ಆಗಲಿ ಪರವಾಗಿಲ್ಲ. ಈಚೆಗೆ ಶ್ರೀಮಾನ್ ಕೌಜಲಗಿಯವರು ಕಂದಾಯ ರದ್ದು ಮಾಡುವಂತಹ ಪ್ರಶ್ನೆಯೇ ಇಲ್ಲ ಅಂದಾಗ ಬಹಳ ವಿಷಾದವು ಅನ್ನಿಸಿತು, ಆಶ್ಚರ್ಯವೂ ಅನ್ನಿಸಿತು ಹೆಚ್ಚುಕಮ್ಮಿ ಈ ದೇಶದಲ್ಲಿ ಕಾಂಗ್ರೆಸ್ ಆಡಳಿತಗಾರರೆಲ್ಲರೂ ತೀರ್ಮಾನಕ್ಕೆ ಬಂದಿದ್ದಾರೆ: ಈ ಕಂದಾಯ ಹಾಕುತ್ತಾ ಇರುವುದು ಒಳ್ಳೆಯದು ಅಂತ. ಯಾವ ದೃಷ್ಟಿಯಿಂದ? ಯಾರು ಇವತ್ತು ದೊಡ್ಡ ದೊಡ್ಡ ಜಮೀನ್ದಾರರು ಅಧಿಕಾರಕ್ಕೆ ಬಂದು ಕುಳಿತಿದ್ದಾರೋ ಅವರದೇ ತೀರ್ಮಾನ. ಏನೆಂದರೆ ಈ ಕಂದಾಯ ರದ್ದು ಮಾಡಬೇಕು. ಆದ್ದರಿಂದ ತೋಟಗಾರರಾಗಲಿ, ಯಾರೇ ಆಗಲಿ, ಬಾಗಾಯ್ತು ಮಾಡುವವರು, ತರಿ ಮಾಡುವವರು ನೂರಾರು ಎಕರೆ ಮಾಡಿ

(ಶ್ರೀ ಎಸ್. ಗೋಪಾಲಗೌಡ)

ಒಂದು ದೊಡ್ಡ ಲಾಭ ಮಾಡುವಂತಹವರು ಯಾರಿದ್ದಾರೆ ಅವರ ವಿಷಯ ಬೇರೆ, ಲಾಭದಾಯಕವಲ್ಲದ ಕೃಷಿ ಮೇಲೆ ತೆರಿಗೆ ಇರತಕ್ಕದ್ದು ಅಲ್ಲ ಎಂಬುದು ನಮ್ಮ ತತ್ವ ಅದನ್ನು ಒಪ್ಪಿಕೊಳ್ಳುವುದಕ್ಕೆ ಯಾರು ಲಾಭ ಪಡೆಯುತ್ತಾ ಇದ್ದಾರೆ ಅವರು ತಯಾರಾಗಿಲ್ಲ. ಅವರು ಯಾರು ಎಂಬುದನ್ನು ಸೂಕ್ಷ್ಮವಾಗಿ ಹೇಳುತ್ತೇನೆ. ಈ 20 ವರ್ಷದಲ್ಲಿ ಪಂಪ್ ಸೆಟ್‌ಗಳನ್ನು ತೆಗೆದುಕೊಂಡಿರುವವರು, ತಮ್ಮ ಬೆಳೆಗೆ ಸಾಲವನ್ನು ಪಡೆಯಲು ಬ್ಯಾಂಕ್‌ನವರಿಗೆ ವಹಿಸಿ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲಪಡೆದವರು ಮತ್ತು ಯಾವ ಯಾವ ಮಾರ್ಗದಲ್ಲಿ ಸರ್ಕಾರದವರು ಸಾಲ ಕೊಡುತ್ತಾರೆ, ಅದನ್ನೆಲ್ಲಾ ತೆಗೆದುಕೊಂಡಿದ್ದಾರೋ, ಹತ್ತು ಎಕರೆ ಇದ್ದವರು ಹತ್ತು ಸಾವಿರ ರೂಪಾಯಿ ಸಾಲ ಮಾಡಿದ್ದಾರೋ ಆ ಜನ ಇವತ್ತು ಕಂದಾಯ ಇದ್ದರೂ ಆಗುತ್ತದೆ, ಅದನ್ನು ಕೊಟ್ಟು ನಾವು ಮುಕ್ತಿ ಪಡೆಯೋಣ ಎಂದು ಇದ್ದಾರೆ. ಆದ್ದರಿಂದ ಭೂಕಂದಾಯ ಏನಿದೆ ಇದು ಲಾಭದಾಯಕವಲ್ಲದ ಹಿಡುವಳಿದಾರರ ಮೇಲೆ ಹಾಕತಕ್ಕದ್ದಲ್ಲ, ರದ್ದು ಮಾಡಬೇಕು. ಈಗಾಲೇ ಕೆಲವು ರಾಜ್ಯಗಳಲ್ಲಿ ಮಾಡಿದ್ದಾರೆ. ಕೆಲವು ಎಕರೆಗಳಷ್ಟು ಮಟ್ಟಿಗಾದರೂ ಮಾಡಿದ್ದಾರೆ. ಆದ್ದರಿಂದ ಈ ವಿಷಯವನ್ನು ಶ್ರೀಮಾನ್ ವೀರೇಂದ್ರಪಾಟೀಲ್‌ರವರ ಸರ್ಕಾರ ಪರಿಶೀಲನೆ ಮಾಡಬೇಕು. ಏನೂ ಬೆಳೆ ಆಗದೆ, ಅವನು ಮಾಡಿರತಕ್ಕ ಶ್ರಮ ಏನು ಮಾಡಿರುತ್ತಾರೆ ಬಿತ್ತುವುದಕ್ಕೆ ಮುಂಚೆ ಅಥವಾ ಬಿತ್ತಿದ ಮೇಲೆ ಅಥವಾ ಮಳೆ ಬಂದು ಫಸಲು ಬರುವ ಕಾಲಕ್ಕೆ, ಜೋಳ ಬೆಳೆಯತಕ್ಕವನಿಗೆ ಜೋಳ ತೆನೆ ಬಂದಾಗ ಬಲವಾಗಿ ಮಳೆ ಬಂದು ಜೋನಿ ರೂಪದಲ್ಲಿ ಕಟ್ಟಿ ಹೋದಾಗ ಸರ್ಕಾರದವರೇನಾದರೂ ಅದಕ್ಕೆ ದುಡ್ಡು ಕೊಡುತ್ತಾರೆ ಏನು ? ಏನೂ ಕೊಡುವುದಿಲ್ಲ. ಬರೀ ಕಂದಾಯ ಕೊಟ್ಟರೆ ಸಾಕು. ಅಭಾವ ಪರಿಸ್ಥಿತಿ ಇದ್ದರೆ ಮಾಫಿ ಮಾಡುತ್ತೇವೆ ಎಂದು ಹೇಳುತ್ತೀರಿ, ಎಲ್ಲಿ ಏನೂ ಸೌಕರ್ಯ ಇಲ್ಲ ಏನೂ ಬರಗಾಲದಂಥ ಪ್ರದೇಶ ಇದೆ ಅಂತಹ ಕಡೆ ಸರ್ಕಾರದವರು ಯಾವ ತೆರಿಗೆಯನ್ನೂ ಹಾಕಬಾರದು, ಇದೇ ನೀತಿಯನ್ನು ಬೆಟರ್‌ಮೆಂಟ್ ಲೆವಿ ಮತ್ತು ವಾಟರ್ ರೇಟ್ ಬಗ್ಗೆಯೂ ಕೂಡ ಜಾರಿಮಾಡತಕ್ಕದ್ದು. ಶ್ರೀಮಾನ್ ಸಾಣಿಕೊಪ್ಪರವರು ಒಂದು ಮಾತು ಹೇಳಿದರು ನೀರು ಕೊಡದಿದ್ದರೆ ಅಂತಹವನಿಗೂ ಅನ್ವಯಿಸುತ್ತೀರಾ ಅಂತ. ಸರ್ಕಾರ ಒಮ್ಮೆ ಹತ್ತು ಲಕ್ಷ ರೂಪಾಯಿಗೂ ಹೆಚ್ಚಿನ ಪ್ರಾಜೆಕ್ಟನ್ನು ಕಟ್ಟಿ ಅದರ ಸುತ್ತುಮುತ್ತ ಜಮೀನು ಅಭಿವೃದ್ಧಿಯಾಗಿದೆ ಆದ್ದರಿಂದ ಅವರು ಕೊಡುವುದಕ್ಕೆ ಮುಂದೆ ಬಂದಾರು, ನೀರು ಪಡೆಯದಿದ್ದವರು, ಜಮೀನು ಅಭಿವೃದ್ಧಿಯಾಗದಿದ್ದವರು ಹಣ ಕೊಡುವುದು ಕಷ್ಟ. ಸದಾ ಬೆಳೆ ಬೆಳೆಸಬೇಕೆಂದರೆ ನೀರಾವರಿ ಸೌಕರ್ಯ ಹೆಚ್ಚಬೇಕು ಸರ್ಕಾರದವರು ಹೆಚ್ಚು ಹೆಚ್ಚು ನೀರು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಭೂಮಿಯನ್ನು ಸುಧಾರಣೆ ಮಾಡಬೇಕು. ಅದಕ್ಕೆ ಹಣ ಎಲ್ಲಿಂದ ಬರಬೇಕು ? ಇದು ಒಂದೇ ಅಂಶ ತಾನೆ ? ಎಷ್ಟೋ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಎರಡು ಪರ್ಸೆಂಟ್ ರಿಟರ್ನ್ ಕೂಡ ಬಂದಿಲ್ಲ, ಹೆಚ್ಚು ಬರಬೇಕು ಅಂತ ಹೇಳುವುದು ಬಹಳ ಸಣ್ಣ ಸರಳವಾದ ವಾದ, ಒಪ್ಪಬಹುದು ಎಂದು ಅನಿಸುತ್ತದೆ. ಮೂಲ ವಿಮರ್ಶೆ ಮಾಡುತ್ತಾ ಹೋದರೆ ಯಾವ ರೈತನ ಜಮೀನು ಇವತ್ತು ಒಂದು ಎಕರೆಗೆ ಒಂದು ಸಾವಿರ ರೂಪಾಯಿ ಆದರೂ ಹಣ ಖರ್ಚು ಮಾಡಿದರೆ ಅದು ಒಂದು ಒಳ್ಳೆಯ ಮಟ್ಟಕ್ಕೆ ಬರುತ್ತದೆಯೋ ಅದರಲ್ಲಿ ಪಂಪ್ ಸೆಟ್ ಹಾಕಬೇಕಾದರೆ ಒಂದು ಸಾವಿರ ರೂಪಾಯಿ ಬೇಕಾಗುತ್ತದೆ ಇದು ಎಕರೆಗೆ ಐದು ಸಾವಿರ ರೂಪಾಯಿ ಇನ್‌ವೆಸ್ಟ್ ಮಾಡಬೇಕು, ಆಗ ಅದು ರಿಟರ್ನ್ ಕೊಡುತ್ತದೆ ಇವತ್ತು ಆ ಸ್ಥಿತಿಯಲ್ಲಿ ನಮ್ಮ ರೈತರು ಇಲ್ಲ. ಆದ್ದರಿಂದ ಸರ್ಕಾರದವರು ಖರ್ಚು ಮಾಡಿ ಕಟ್ಟತಕ್ಕ ಈ ಕೆರೆ ಕಟ್ಟೆಗಳ ಅಧೀನದೊಳಗೆ ಇರತಕ್ಕ ಜಮೀನುಗಳ ಮೇಲೆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುವಂತಹ ಕ್ರಮವೇ ಬದಲಾವಣೆಯಾಗಬೇಕು. ಅವನು ಯಾವತ್ತು ಯಾವ ಬೆಳೆ ಬೆಳೆಯುತ್ತಾನೋ ಅದರ ಮೇಲೆ ಕಂದಾಯ ಹಾಕತಕ್ಕದ್ದು ಆಧುನಿಕವಾದ ಕ್ರಮ. ಅಭಿವೃದ್ಧಿ ಆಯಿತು ಎಂದು ಹಾಕುವುದಲ್ಲ. ಏಕೆಂದರೆ ಅವನು ಅಭಿವೃದ್ಧಿ ಮಾಡುವಂತಹ ಕೆಲಸ ಮುಂದೆ ಇರುತ್ತದೆ, ನೀರು ಬಂದಿರುತ್ತದೆ, ಜಮೀನಿನಲ್ಲಿ ಬೆಳೆ ತೆಗೆಯಬೇಕಾದರೆ ಬಹಳ ಮೆಹನತ್ತು ಮಾಡಬೇಕಾಗುತ್ತದೆ, ಕಷ್ಟಪಡಬೇಕಾಗುತ್ತದೆ, ರೂಢಿಸಬೇಕಾಗುತ್ತದೆ. ನೀರು ಬಂದ ಕೂಡಲೆ ಜಮೀನಿನಲ್ಲಿ ಬೆಳೆ ಬರುವುದಿಲ್ಲ. ಒಂದಕ್ಕೆ ಹತ್ತು ಪಟ್ಟು ಶ್ರಮಪಡಬೇಕಾಗುತ್ತದೆ. ಈ ಅಂಶವನ್ನು ತಾವು ಮರೆಯುತ್ತೀರಿ. ಸಾವಿರ ರೂಪಾಯಿ ಉತ್ಪನ್ನ ಮಾಡಬೇಕಾದರೆ ಅವನು 700 ರೂಪಾಯಿನ ಕೆಲಸವನ್ನು ಮಾಡಿರುತ್ತಾನೆ. ನೀರಾವರಿ ಮಾಡುವುದು ಅಷ್ಟು ಸುಲಭವಲ್ಲ. ಈ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಯಾವ ವಿವೇಚನೆಯೂ ಇಲ್ಲದೆ 300 ರೂಪಾಯಿಗಳನ್ನು ಕೂಡ ವಸೂಲು ಮಾಡುವ ಸ್ಥಿತಿಯಲ್ಲಿಲ್ಲದಿರುವಾಗ ಅದಕ್ಕೆ ಬದಲಾಗಿ 500 ರೂಪಾಯಿ ಎಂದು ನಿಗದಿ ಮಾಡಲು ಮತ್ತೊಂದು ಮಸೂದೆಯನ್ನು ತಂದಿರುವುದು ಮತ್ತು ಆ ಹಣವನ್ನು ಮುಂಗಡವಾಗಿ ಕೊಡಬೇಕು, ಕೊಡುವವರಿದ್ದಾರೆ ಎಂದು

ಹೇಳುವುದು ಹಾಸ್ಯಾಸ್ಪದವಾಗಿದೆ. ಕೊಡುವವರಿದ್ದಾರೆಯೇ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಯಾರಾದರೂ ಮುಂದೆ ಬಂದು ಇದನ್ನು ಕೊಟ್ಟರೆ ಅವರ ಹೆಸರನ್ನು ಹೇಳಿ ಕೊಂಡು ಕೊಡಲು ಸಾಧ್ಯವಿಲ್ಲದಿರುವವರನ್ನು ಬಲಾತ್ಕಾರಮಾಡುವುದು ಉಚಿತವಲ್ಲ. ಒಟ್ಟಿನಲ್ಲಿ ಇದು ಸರಿಯಾದ ಕ್ರಮವಲ್ಲ. ಒಬ್ಬೊಬ್ಬರು ರೈತರು ಜಮೀನನ್ನು ಅಡವಿಟ್ಟು ಪಂಪುಸೆಟ್ಟು ತಂದು ಕೆಲಸಮಾಡುವವರಿಗೆ ಇದು ಅನ್ವಯವಾಗಬಹುದು. ಈ ಮಸೂದೆ ಕಾರ್ಯಗತವಾಗುವಂತೆ ಕಂಡುಬರುವುದಿಲ್ಲ. ಏಕೆಂದರೆ ಒಂದು ಭಯವಿದೆ. ಒಂದು ಯೋಜನೆ ಈ ದಿವಸ ತೆಗೆದುಕೊಂಡರೆ ಅದು ಪೂರ್ತಿಯಾಗಲು 20 ವರ್ಷ ಬೇಕು. ವೊಮ್ಮಗನ ಕಾಲಕ್ಕೆ ನೀರಾವರಿಯಾಗುವುದಾದರೆ ಈಗ ರೈತ ಡಿಪಾಜಿಟ್ ಇಡಲು ಒಪ್ಪುವಂತೆ ಕಾಣುವುದಿಲ್ಲ. ಏಕಾಏಕಿ ಈ ಲೆವಿಯನ್ನು ರೈತರಮೇಲೆ ಹಾಕುವುದರಿಂದ ತೊಂದರೆಯಾಗುತ್ತದೆ. ಸರಕಾರದ ಉದ್ದೇಶವೂ ಸಾಧನೆಯಾಗುವುದಿಲ್ಲ, ವಸೂಲಾತಿಯಾಗುವುದಿಲ್ಲ. ಆದುದರಿಂದ ಬೇರೆ ಏನಾದರೂ ಮಾರ್ಗ ಹುಡುಕಬೇಕು; ಬೇರೆ ರೀತಿಯಲ್ಲಿ ಆದಷ್ಟು ಸೌಕರ್ಯ ಕೊಡಬೇಕು, ಭೂಮಿ ಹಸನು ಮಾಡಿ ನೀರಾವರಿ ತರಲು ಬೇಕಾದ ಸೌಲಭ್ಯವನ್ನೆಲ್ಲಾ ರೈತರಿಗೆ ಕೊಟ್ಟರೆ ಅವರು ಬೆಳೆಯಬಹುದು. ಅವರು ಹೆಚ್ಚಾಗಿ ಬೆಳೆದರೆ ಆಗ ಅವರಿಗೆ ಹೆಚ್ಚು ಆದಾಯ ಬಂದರೆ ಆಗ ಅದರಲ್ಲಿ ಸ್ವಲ್ಪ ಕೊಡಬೇಕೆಂದು ಕೇಳುವುದು ನ್ಯಾಯ ವಾದೀತು. ಆದುದರಿಂದ ಈ ಮಸೂದೆಯನ್ನು ವಿರೋಧಿಸುತ್ತೇನೆ.

6-00 P.M.

Mr. SPEAKER.—The allotted time is over. Another half-an-hour more is required. If approved, the time will be extended by half-an-hour.

HON'BLE MEMBERS.—Yes.

Mr. SPEAKER.—The time is extended by half-an-hour.

† Sri D. PARAMESWARAPPA.—Sir, I am really thankful to the Hon'ble members of this House who have taken extra interest and who have pleaded for the ryots. But I regret to say that they have not suggested any other constructive alternatives.

Sri M. S. KRISHNAN.—We have made constructive suggestions and suggested that it may be levied on the basis of the income of the raiyats. What you have suggested is out moded.

Sri D. PARAMESWARAPPA.—My contention in support of this Bill was that according to the present Act of 1957 as amended by Act 13 of 1966, the maximum limit that is fixed is Rs. 300. In view of the present circumstances and in view of the fact that we have not been able to collect the arrears, it has reasonably been enhanced to a maximum limit of Rs. 500. This is the object.

ಶ್ರೀ ಎಂ. ಎಸ್. ಕೃಷ್ಣನ್.—ಆದಾಯದ ಆಧಾರದಮೇಲೆ ಹಾಡಿ ಎಂದು ಸಲಹೆ ಮಾಡಿದ್ದೇವೆ.

Sri D. PARAMESWARAPPA.—I am substantiating my contention. There are various arguments advanced. One argument was that whenever the Government construct projects, they should not collect anything by way of contribution or any tax. That was the type of argument that was advanced by some of my Hon'ble friends. Another type of argument was that this Rs. 500 is very high and since the raiyats are not able to contribute so much, it is unfair to collect the contribution at the rate of Rs. 500. Sir, I made a reference to the basis on which we are levying contribution. It is based according to

(SRI D. PARAMESWARAPPA)

the Act of 1964. It is not based on rational principle. Therefore we have to amend that by Act 13 of 1966 by fixing the maximum at Rs. 300 per acre. Sir, in this connection, I would like to say one thing. Our Hon'ble members, not all but some, have felt that it is a very high limit. I said that it is not the uniform limit that is fixed. It may happen in some cases wherein the market value of the land has increased and I did make a reference to the Act. It is stated in the Act that difference is only between the market value before the commencement of the Project and after the completion of the project. I quoted also some mathematical illustrations, wherein this maximum limit does not go in all cases. In some cases it may go. Mr. Chennabasappa who was the ex-Public Works Minister and who was in charge of the Public Works Department said that the value of the land increases not only as a result of irrigational facilities but due to other factors also. Sir, let him go and examine in an area and let him study the conditions and have a comparative view of the lands which are not irrigated and which do not come under the irrigable command and the lands which come under irrigable command. The increase in the value of the lands under the irrigable command, will be much higher whereas adjacent lands will be very less.

Sir, the Hon'ble Member also referred that the lands nearby Bangalore would cost very much. We have to keep in view that Bangalore is an industrial town and from that point of view any place nearby Bangalore should cost more. That is from the industrial aspect of view. Another thing from the economic point of view that we must know, Sir, is that the prices of any article or land are always governed by supply and demand. Sir, as we all know, there is scarcity of land and growth of population. When there is scarcity of land, naturally that may be one of the factors. But when irrigation facilities are provided to certain lands invariably the value of the lands increases. With these words I commend that the Bill which is before the House may be passed.

Mr. SPEAKER.—Now I shall put the consideration of motion to the vote of the House. The question is :

"That the Mysore Irrigation (Levy of Betterment Contribution and Water Rate) (Second Amendment) Bill, 1968 be taken into consideration."

The motion was adopted.

Mr. SPEAKER.—I shall now put the clauses to the vote of the House.

CLAUSE 2

Mr. SPEAKER.—The question is :

That Clause 2 do stand part of the Bill.

Now, I call upon Mr. T. R. Shamanna to move his amendment proposed to clause 2.

Sri T. R. SHAMANNA.—Sir, I beg to move that :

"For the words "five hundred rupees" proposed to be substituted in Section 4, the words "three hundred and fifty" shall be substituted."

Mr. SPEAKER.—Amendment moved :

"That for the words "five hundred rupees" proposed to be substituted in Section 4, the words "three hundred and fifty" shall be substituted."

Now, I call upon Mr. Krishnan to move his amendments.

Sri M. S. KRISHNAN.—Sir, I beg to move :

"That for the words "five hundred rupeee" proposed to be substituted in Section 4, the original words "three hundred rupees" shall be retained."

Mr. SPEAKER.—Amendment moved :

"That for the worJs "five hundred rupees" proposed to be substituted in Section 4, the original words "three hundred rupees" shall be retained.

Sri M. S. KRISHNAN.—Sir, I also beg to move ;

"That the following sub-clause 2 shall be added to Clause 2, of *viz.*

"That all those who own land up to 5 acres and below shall be exempted from the betterment levy."

Mr. SPEAKER.—Amendment moved :

"That the following sub-clause (2) shall be adde l to clause 2, *viz.*

(2) All those who own lands up to 5 acres and below shall be exempted from betterment levy."

Sri M. S. KRISHNAN.—Sir, there is only one point I want to urge that if at all any such betterment levy has got to be there, it should be on the basis of the income and not on the basis of the value of the lands. Secondly, the levy has not been collected all along and it

(˜RI M. S. KRISHNAN)

cannot therefore be collected even if they impose it. Thirdly, persons who own lands up to 5 acres and below shall be completely exempted from this levy. Fourthly, as there are scarcity conditions prevailing, there is no point in bringing such a Bill.

Mr. SPEAKER.—Now, I shall put the amendments proposed to clause 2 to the vote of the House, one by one.

Mr. SPEAKER.—The question is:

"That for the words "five hundred rupees" proposed to be substituted in Section 4, the words "three hundred and fifty rupees" shall be substituted."

The amendment was negatived.

Mr. SPEAKER.—The question is:

"That for the words "five hundred rupees" proposed to be substituted in Section 4, the original words "three hundred rupees" shall be retained."

The amendment was negatived.

Mr. SPEAKER.—The question is:

"That the following sub-clause (2) shall be added to clause 2, *viz.*

(2) All those who own lands up to 5 acres and below shall be exempted from betterment levy."

The amendment was negatived.

Mr. SPEAKER.—I shall put clause 2 to the vote of the House. The question is:

"That clause 2 stand part of the Bill."

The motion was adopted.

(Clause 2 was added to the Bill.)

Mr. SPEAKER.—The question is:

"That Clause 1, the Title and the Preamble stand part of the Bill,"

The motion was adopted.

lause 1, the title and the preamble were added to the Bill,

Motion to pass.

Sri D. PARAMESWARAPPA.—Sir, I beg to move :

"That the Mysore Irrigation (Levy of Betterment and water rate) (Amendment) Bill 1968 be passed."

Mr. SPEAKER.—The question is :

"That the Mysore Irrigation (Levy of Betterment and water rate) (Amendment) Bill 1968 be passed."

The motion was adopted.

Mr. SPEAKER.—The House will rise and meet tomorrow at 12.00 noon. Tomorrow is non-official business.

The Assembly adjourned at Twenty Minutes past Six of the Clock to meet again at Twelve of the Clock on Tuesday the 17th September 1968.